

ವೀರ ಕಂಪಿಲರಾಯ
ಎನ್. ರಂಗನಾಥ ಶರ್ಮಾ

518

# ವೀರ ಕಂಪಣರಾಯ

ಎಸ್. ರಂಗನಾಥಶರ್ಮಾ

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009

VEERA KAMPANARAYA—a life sketch of Veera-Kampanaraya, a Prince of Vijayanagar written by Vidwan N. Ranganatha Sharma and Published by G. K. Ananthram for IBH Prakashana Gandhinagar Bangalore 560 009.

© 1988 by the Publisher

ಚಿತ್ರಗಳು : ಪ್ರಮೀಳ

ಬೆಲೆ : ರೂ. 3–50

ಮೊದಲವೆಯ ಮುದ್ರಣ : 1983

ಎರಡನೆಯ ಮುದ್ರಣ : 1988

ಪ್ರಕಾಶಕರು : ಐಬಿಎಚ್ ಪ್ರಕಾಶನ ಇವರ ಪರವಾಗಿ ಜಿ. ಕೆ. ಅನಂತರಾಮ್ ಐದನೆಯ ಮುಖ್ಯರಸ್ತೆ, ಗಾಂಧಿನಗರ ಬೆಂಗಳೂರು 560 009. ಮುದ್ರಕರು : ಎಚ್. ಎಸ್. ಎನ್. ರಾವ್ ಐಬಿಎಚ್ ಪ್ರಕಾಶನ ಪ್ರಿಂಟರ್ಸ್ ಎಂ. ಎಸ್. ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಬೆಂಗಳೂರು 560 054.

# ವೀರ ಕಂಪಣರಾಯ

## ಹಿನ್ನೆಲೆ

ಭಾರತ ದೇಶವು ಹಲವಾರು ಪರಕೀಯ ಧಾಳಿಗಳನ್ನು ಎದು ರಿಸಿದೆ. ಆ ಧಾಳಿಗಳಿಂದ ನಮ್ಮ ರಾಷ್ಟ್ರಕ್ಕೆ ಬಹಳ ಕಷ್ಟನಷ್ಟಗಳು ಸಂಭವಿಸಿವೆ. ಆಗ ಈ ದೇಶದಲ್ಲಿ ಆಳುತ್ತಿದ್ದ ರಾಜರಲ್ಲಿ ಒಗ್ಗಟ್ಟಿಲ್ಲದೇ ಹೋದುದೇ ಇದಕ್ಕೆ ಕಾರಣ. ಹೀಗೆ ಧಾಳಿ ನಡೆದಾಗ ಬುದ್ಧಿ ಕಲಿತ ನಮ್ಮವರು ಆಗಾಗ ಒಗ್ಗಟ್ಟಿನಿಂದ ಸಾಮ್ರಾಜ್ಯವನ್ನು ಸ್ಥಾಪಿಸಿ ಪರಕೀಯರನ್ನು ಯಶಸ್ವಿಯಾಗಿ ಎದುರಿಸಿಯೂ ಇದ್ದಾರೆ. ಗ್ರೀಕರ ಧಾಳಿಯಾದಾಗ ಮೌರ್ಯ ಸಾಮ್ರಾಜ್ಯವೂ ಶಕರ ಆಕ್ರಮಣವಾದಾಗ ಗುಪ್ತ ಸಾಮ್ರಾಜ್ಯವೂ ಹೂಣರ ಹಾವಳಿಯನ್ನೆದುರಿಸುವಾಗ ಕನೋಜ್ ಸಾಮ್ರಾಜ್ಯವೂ ಸ್ಥಾಪಿಸಲ್ಪಟ್ಟವು. ಹೀಗೆ ಒಂದೊಂದು ಧಾಳಿ ನಡೆದಾಗ ಸ್ಥಾಪಿಸಲ್ಪಟ್ಟ ಈ ಸಾಮ್ರಾಜ್ಯಗಳು ಪ್ರಜೆಗಳ ಯೋಗಕ್ಷೇಮವನ್ನು ಚೆನ್ನಾಗಿ ನೋಡಿಕೊಂಡಿವೆ. ಆದರೆ ನಮ್ಮಲ್ಲಿ ಐಕಮತ್ಯವಿಲ್ಲದೆ ಒಳಜಗಳಗಳು ಹುಟ್ಟಿ ಈ ಸಾಮ್ರಾಜ್ಯಗಳು ಕೆಲವು ಕಾಲದಲ್ಲಿ ಕುಸಿದುಹೋದವು. ಇದರಿಂದ ಮತ್ತೆ ಮತ್ತೆ ಪರಕೀಯರ ಆಕ್ರಮಣಕ್ಕೆ ಭಾರತ ದೇಶ ಬಲಿಯಾಗುತ್ತ ಬಂದಿತು.

ಕ್ರಿ. ಶ. 8ನೆಯ ಶತಮಾನದಲ್ಲಿ ನಮ್ಮ ದೇಶಕ್ಕೆ ಮುಸಲ್ಮಾನರ ಪ್ರವೇಶವಾಯಿತು. ಗಜನಿ ಮುಹಮ್ಮದನು ಗುಜರಾತಿನ ಸೋಮನಾಥದವರೆಗೆ ನುಗ್ಗಿ ಅಪಾರ ಸಂಪತ್ತನ್ನು ದೋಚಿ

ಕೊಂಡು ಹೋದನು. ಆಮೇಲೆ ಘೋರಿ ಮಹಮ್ಮದನ ದಂಡ ಯಾತ್ರೆ ನಡೆಯಿತು. ಹೀಗೆ ಒಬ್ಬರ ಹಿಂದೆ ಇನ್ನೊಬ್ಬರು ಧಾಳಿ ಯಿಡುತ್ತ ಮೊದಲು ಗಾಂಧಾರ, ಪಂಜಾಬ್ ಪ್ರಾಂತಗಳನ್ನೂ ತರುವಾಯ ದಿಲ್ಲಿ, ಕನೋಜ್ ಪ್ರಾಂತಗಳನ್ನೂ ಹಿಡಿದು ಬಂಗಾಳದ ವರೆಗೆ ಮುಸಲ್ಮಾನರು ತಮ್ಮ ರಾಜ್ಯವನ್ನು ವಿಸ್ತರಿಸಿದರು. ಕ್ರಿ. ಶ. 13ನೇ ಶತಕದ ಕಡೆಯುವರೆಗೆ ಈ ಆಕ್ರಮಣ ಉತ್ತರ ಭಾರತಕ್ಕೆ ಮಾತ್ರ ಸೀಮಿತವಾಗಿತ್ತು. ದಕ್ಷಿಣ ಭಾರತದ ಜನರಿಗೆ ಈ ಮುಸಲ್ಮಾನರ ಧಾಳಿಯು ಬಿಸಿ ತಟ್ಟಿರಲಿಲ್ಲ. ಇವರಿಗೆ ಮೊದಲು ಬಿಸಿಯನ್ನು ಮುಟ್ಟಿಸಿದವನು ಅಲ್ಲಾವುದ್ದೀನ್ ಖಿಲ್ಜಿ.

ಆಗ ನರ್ಮದಾ ನದಿಯು ಈಚೆಗೆ ದಕ್ಷಿಣದಲ್ಲಿ ಮೂರು ಪ್ರಬಲ ರಾಜ್ಯಗಳಿದ್ದವು. ಓರಂಗಲ್ಲಿನ ಕಾಕತೀಯರ ರಾಜ್ಯ, ದೇವ ಗಿರಿಯ ಯಾದವ ರಾಜ್ಯ, ದ್ವಾರಸಮುದ್ರದ (ಹಳೆಯಬೀಡು) ಹೊಯ್ಸಳ ಬಲ್ಲಾಳ ರಾಜ್ಯ–ಇವೇ ಆ ಮೂರು. ಕ್ರಿ.ಶ. 1294 ರಲ್ಲಿ ಅಲ್ಲಾವುದ್ದೀನನು ಬಲವಾದ ಮುಸಲ್ಮಾನ ಸೇನೆಯೊಡನೆ ನುಗ್ಗಿಬಂದು ದೇವಗಿರಿಯ ರಾಮದೇವನನ್ನು ಜಯಿಸಿ ಅಪಾರ ವಾದ ಐಶ್ವರ್ಯವನ್ನು ದೆಹಲಿಗೆ ಸಾಗಿಸಿದನು. ಅನಂತರ ಈತನು ದೆಹಲಿಯ ಸುಲ್ತಾನನಾದ ತನ್ನ ದೊಡ್ಡಪ್ಪ ಜಲಾಲುದ್ದೀನನನ್ನು ಕೊಂದು ಸಿಂಹಾಸನವನ್ನು ಏರಿದನು. ಈತನಿಗೆ ದಕ್ಷಿಣ ಭಾರತದ ಸಂಪತ್ತಿನ ರುಚಿ ಗೊತ್ತಿದ್ದಿತು. ಆದ್ದರಿಂದ ಇದನ್ನೆಲ್ಲಾ ಕೊಳ್ಳೆ ಹೊಡೆದು ಒರಬೇಕೆಂದು ಅಲ್ಲಾವುದ್ದೀನನು ತನ್ನ ಸೇನಾಪತಿ ಮಲ್ಲಿಕ್ ಕಾಫರನನ್ನು ದೊಡ್ಡ ಸೈನ್ಯದೊಡನೆ ದಂಡಯಾತ್ರೆಗೆ ಕಳಿಸಿ ದನು. ಮಲ್ಲಿಕ್ ಕಾಫರನು ದಕ್ಷಿಣ ಭಾರತದ ಮೇಲೆ ಸಾಗಿಬಂದು 1310ರಲ್ಲಿ ಓರಂಗಲ್ಲನ್ನು ಸಂಪೂರ್ಣವಾಗಿ ನಾಶಮಾಡಿ ಹೊಯ್ಸಳ ರಾಜ್ಯಕ್ಕೆ ಧಾಳಿಯಿಟ್ಟು ಅಲ್ಲಿಯ ರಾಜನಾದ ಮುಮ್ಮಡಿ ಬಲ್ಲಾಳ ನನ್ನು ಸೋಲಿಸಿ ದ್ವಾರಸಮುದ್ರವನ್ನು ಧ್ವಂಸಗೊಳಿಸಿದನು.



ಮ್ಲೇಚ್ಛರ ಹಾವಳಿ

ಆಮೇಲೆ ತಮಿಳುನಾಡಿನ ಪಾಂಡ್ಯ ರಾಜ್ಯವನ್ನು ಕೊಳ್ಳೆ ಹೊಡೆದು ಮಧುರೆಯಲ್ಲಿ ಒಬ್ಬ ಸುಬೇದಾರನನ್ನು ನೇಮಿಸಿ ರಾಮೇಶ್ವರದ ವರೆಗೆ ನುಗ್ಗಿದನು. ರಾಮೇಶ್ವರದಲ್ಲಿ ಒಂದು ಮಸೀದಿಯನ್ನು ಕಟ್ಟಿಸಿ, ಅಸಂಖ್ಯಾತವಾದ ಚಿನ್ನ, ರತ್ನ ರಾಶಿಗಳನ್ನು ಹೇರಿಸಿ ಕೊಂಡು ದಿಲ್ಲಿಗೆ ಹಿಂದಿರುಗಿದನು. ದಕ್ಷಿಣ ಭಾರತ ಮುಸಲ್ಮಾನರ ಹಾವಳಿಗೆ ಪೂರ್ಣವಾಗಿ ಸಿಕ್ಕಿ ತತ್ತರಿಸಿಹೋಯಿತು. ಇಲ್ಲಿನ ಸಾವಿರಾರು ವರ್ಷಗಳ ನಾಗರಿಕತೆಗೆ ಅವಸಾನಕಾಲ ಬಂದಿತೋ ಎನ್ನಿಸಿತು. ಎಲ್ಲೆಲ್ಲಿಯೂ ಹಾಹಾಕಾರವೆದ್ದಿತು.

ಅನಂತರ ಮಹಮ್ಮದ್‌ಬಿನ್ ತೊಘಲಕನು ದಿಲ್ಲಿಯ ಸಿಂಹಾಸನವನ್ನೇರಿದನು. ಇವನು ಮತಾಂಧನೆಂದೂ ಅತ್ಯಂತ ಕ್ರೂರಿಯೆಂದೂ ಹೆಸರಾಗಿದ್ದಾನೆ. ದೇವಗಿರಿಯ ಹರಪಾಲರಾಯ ನನ್ನು ಮೈದೊಗಲು ಸುಲಿಸಿ, ಕೊಲ್ಲಿಸಲಾಯಿತು. ಎಲ್ಲಿ ನೋಡಿ ದರೂ ಕೊಲೆ ಸುಲಿಗೆ ವಿಧ್ವಂಸಕಕೃತ್ಯಗಳು ಎಡೆಬಿಡದೆ ನಡೆಯ ತೊಡಗಿದವು. ಅಲ್ಪಾವಧಿಯಲ್ಲಿ ದಕ್ಷಿಣ ಭಾರತದ ಹಿಂದೂ ರಾಜ್ಯ ಗಳು ಉರುಳಾಡಿ ಹೋದವು. ಮಧುರೆಯ ಸುಬೇದಾರನು ಸ್ವತಂತ್ರನಾಗಿ ಸುಲ್ತಾನನೆನಿಸಿಕೊಂಡು ರಾಜ್ಯವಾಳತೊಡಗಿದನು. ಸುಲ್ತಾನಗಿರಿಯಲ್ಲಿಯೂ ಸಂಚುಗಳು ನಡೆದು ಒಬ್ಬರನ್ನೊಬ್ಬರು ಕೊಂದು ಸುಲ್ತಾನರಾದರು. ಪ್ರಜೆಗಳ ಕಷ್ಟವನ್ನು ಕೇಳುವವರೇ ಇಲ್ಲವಾಯಿತು. ದೇವಾಲಯಗಳು ಉರುಳಿದವು. ದೇವಮೂರ್ತಿ ಗಳನ್ನು ಒಡೆಯಲಾಯಿತು. ಬಲಾತ್ಕಾರದ ಮತಾಂತರವೂ ನಡೆಯಿತು.

ಈ ಧಾಳಿಗಳಿಂದ ದಕ್ಷಿಣದಲ್ಲಿ ಮರಾಠರು, ಆಂಧ್ರರು, ತಮಿಳರು, ಕನ್ನಡಿಗರು—ಈ ನಾಲ್ಕು ಜನಾಂಗಗಳು ಮೂರ್ಛೆ ಗೊಂಡಿದ್ದವೆಂದು ಹೇಳಬಹುದು. ಇವುಗಳಲ್ಲಿ ಮೊದಲು ಮೂರ್ಛೆ ಯಿಂದ ಚೇತರಿಸಿಕೊಂಡದ್ದು ಧೀರತನದಿಂದ ಹೆಜ್ಜೆ ಇಟ್ಟು

ಮುಸಲ್ಮಾನ್ ಧಾಳಿಕೋರರನ್ನು ಎದುರಿಸಿದ್ದು ಕನ್ನಡ ಜನಾಂಗ. ಈ ಜನಾಂಗದ ಧೀರ ಪ್ರಯತ್ನದಿಂದ ಸ್ಥಾಪಿತವಾದದ್ದು ವಿಜಯ ನಗರ ಸಾಮ್ರಾಜ್ಯ.

## ವಿಜಯನಗರದ ಸ್ಥಾಪನೆ

ಹೀಗೆ 14ನೆಯ ಶತಮಾನದ ಆದಿಯಲ್ಲಿ ಪರಕೀಯರ ಆಕ್ರಮಣದಿಂದ ದಕ್ಷಿಣ ಭಾರತದಲ್ಲಿ ಭಾರಿ ಗೊಂದಲವೆದ್ದಿತು. ಇಲ್ಲಿ ಎಷ್ಟೋ ಮಂದಿ ರಾಜರೂ ಪಾಳೆಯಗಾರರೂ ನಾಯಕರೂ ಇದ್ದರು. ಇವರಲ್ಲಿ ಸಂಘಟನೆ ಇರಲಿಲ್ಲ. ಇವರಿಗೆ ಪ್ರತ್ಯೇಕವಾಗಿ ಮುಸಲ್ಮಾನರನ್ನು ಎದುರಿಸುವ ಸಾಮರ್ಥ್ಯ ಇಲ್ಲದೇಹೋಯಿತು. ಎಲ್ಲರನ್ನೂ ಹುರಿದುಂಬಿಸಿ ಸಂಘಟನೆಯನ್ನು ಮಾಡಿ ಹೊಸ ಚೈತನ್ಯವನ್ನು ಮೂಡಿಸುವ ನಾಯಕತ್ವಕ್ಕೆ ಕೊರತೆಯಾಗಿತ್ತು. ಆಗ ಕರ್ನಾಟಕದಲ್ಲಿರುವ ದ್ವಾರಸಮುದ್ರದ ವೀರಬಲ್ಲಾಳ ನೊಬ್ಬನು ಈ ನಾಯಕತ್ವವನ್ನು ವಹಿಸಲು ಮುಂದಾದನು. ಮಲ್ಲಿಕ್ ಕಾಫರನ ಹೊಡೆತಕ್ಕೆ ತನ್ನ ರಾಜಧಾನಿ ಕೈದಪ್ಪಿದರೂ ಈ ಸಾಹಸಿಯು ಧೈರ್ಯವನ್ನು ಬಿಡಲಿಲ್ಲ. ಸುಮಾರು ಮೂವತ್ತೈದು ವರ್ಷಗಳವರೆಗೆ ಊರೂರು ಸಂಚರಿಸುತ್ತ ಹಿಂದೂ ಗಳ ಸಂಘಟನೆಯಲ್ಲಿ ತೊಡಗಿದ್ದನು. ಆ ಸಮಯದಲ್ಲಿ ಆ ವೀರ ನೊಬ್ಬನೇ ಹಿಂದೂಗಳ ಆಶಾಕಿರಣವಾಗಿದ್ದನು. ಬಹಳ ಮಂದಿ ದೇಶಾಭಿಮಾನಿ ಯೋಧರು ಅವನ ಬಳಿ ಸೇರಿದರು. ಹೀಗೆ ಸೇರಿ ದವರಲ್ಲಿ ಮಂಡಲೇಶ್ವರನಾದ ಸಂಗಮ ಮತ್ತು ಮಕ್ಕಳು ಪ್ರಮುಖರು.

ಸಂಗಮನು ಎಲ್ಲಿ ಮಂಡಲೇಶ್ವರನಾಗಿದ್ದನೆಂಬುದಕ್ಕೂ ಅವನು ಮಾಡಿದ ಕಾರ್ಯಗಳೇನೆಂಬುದಕ್ಕೂ ಸರಿಯಾದ ವಿವರ

ದೊರೆಯುವುದಿಲ್ಲ. ಆತನು ವೀರಬಲ್ಲಾಳನ ಅಧೀನದಲ್ಲಿದ್ದ ಒಬ್ಬ ಮಂಡಲೇಶ್ವರನೆಂದು ಮಾತ್ರ ಹೇಳಬಹುದಾಗಿದೆ. ಈತನೂ ಈತನ ಮಕ್ಕಳೂ ತುಂಬ ಸಮರ್ಥರಾದ್ದರಿಂದ ಇವರ ವರ್ಚಸ್ಸು ಎಲ್ಲರ ಮೇಲೆ ಪ್ರಭಾವವನ್ನು ಬೀರಿತ್ತು. ವೀರ ಬಲ್ಲಾಳನು ಮಧುರೆಯಲ್ಲಿ ತಳ ಊರಿದ್ದ ಸುಲ್ತಾನನೊಡನೆ ಯುದ್ಧದಲ್ಲಿ ತೊಡಗಿದ್ದಾಗ ಮೋಸದಿಂದ ಹತನಾದನು. ಅವನ ಮಗ ವಿರೂಪಾಕ್ಷನು ಅಸಮರ್ಥನಾದ್ದರಿಂದ ನಾಯಕತ್ವವು ಸಹಜವಾಗಿ ಸಂಗಮಪುತ್ರರಿಗೆ ಪ್ರಾಪ್ತವಾಯಿತು.

ಸಂಗಮನ ಮಕ್ಕಳು ಐವರು: ಹರಿಹರ (ಹಕ್ಕ), ಕಂಪಣ್ಣ, ಬುಕ್ಕ, ಮಾರಪ್ಪ ಮತ್ತು ಮುದ್ದಪ್ಪ. ಇವರೆಲ್ಲರೂ ಕಾರ್ಯ ದಕ್ಷರು. ಅಣ್ಣ ತಮ್ಮಂದಿರಲ್ಲಿ ವಾತ್ಸಲ್ಯವೂ ಒಗ್ಗಟ್ಟೂ ಚೆನ್ನಾಗಿತ್ತು. ಇವರು ಹಿಂದೂಗಳ ಮತ್ತು ಹಿಂದೂ ಧರ್ಮದ ರಕ್ಷಣೆಗಾಗಿ ಟೊಂಕ ಕಟ್ಟಿ ನಿಂತಿದ್ದರಿಂದ ವಿಜಯನಗರ ಸ್ಥಾಪನೆ ಸಾಧ್ಯವಾಯಿತು.

ಈ ಕಾಲದಲ್ಲಿ ಆನೆಗೊಂದಿಯ ಪ್ರದೇಶವು ರಾಜಕೀಯವಾಗಿ ಮಹತ್ವವನ್ನು ಪಡೆದಿತ್ತು. ಪರ್ವತಗಳಿಂದ ಸುತ್ತುವರಿಯಲ್ಪಟ್ಟ ಈ ಪ್ರಾಂತವು ಉತ್ತರದಿಂದ ನುಗ್ಗಿ ಬರುವ ಮಹಮ್ಮದೀಯರನ್ನು ತಡೆಯಲು ಆಯಕಟ್ಟಿನ ಸ್ಥಳವಾಗಿತ್ತು. ಆದ್ದರಿಂದಲೇ ಇದರ ಮೇಲೆ ಮಹಮ್ಮದ್ ಬಿನ್ ತೊಘಲಕನ ಕಣ್ಣು ಬಿದ್ದು ಆನೆಗೊಂದಿಯ ರಾಜನಾದ ಕಂಪಿಲರಾಯನ ಸಂತತಿಯನ್ನು ಅವನು ನಿರ್ಮೂಲ ಮಾಡಿದ್ದನು. ಸಂಗಮಪುತ್ರನಾದ ಹರಿಹರನ ಚಟುವಟಿಕೆ ಈ ಪ್ರಾಂತದಲ್ಲಿ ವಿಶೇಷವಾಗಿ ನಡೆದಿತ್ತು. ಜನಾಂಗದ ಬಲವನ್ನು ವರ್ಧಿಸುವ ಮಹಾಕಾರ್ಯದಲ್ಲಿ ಆತನು ತನ್ನ ತಮ್ಮಂದಿರೊಡನೆ ದೃಢ ಪ್ರಯತ್ನವನ್ನು ನಡೆಸಿದ್ದನು. ಆಗ ಹರಿಹರನಿಗೆ ದೈವಿಕವಾಗಿ ಒಂದು ದೊಡ್ಡ ಸಹಾಯ ದೊರ

ಕಿತು. ಅದೇ ಶ್ರೀ ವಿದ್ಯಾರಣ್ಯರ ಪರಿಚಯ ಮತ್ತು ಅವರ ಮಂತ್ರಾಲೋಚನಾಶಕ್ತಿ.

ವಿದ್ಯಾರಣ್ಯರು ಸನ್ಯಾಸಿಗಳು. ಅವರ ಮೊದಲ ಹೆಸರು ಮಾಧವ ಎಂದಿತ್ತು. ವಿದ್ಯಾರಣ್ಯರು ದೊಡ್ಡ ವಿದ್ವಾಂಸರೂ ಜ್ಞಾನಿಗಳೂ ಆಗಿದ್ದರು. ಮಹಮ್ಮದಿಯರ ಹಾವಳಿಯಿಂದ ವೈದಿಕಧರ್ಮಕ್ಕೆ ಕುತ್ತು, ಹಿಂದೂ ಜನತೆಗೆ ಸಂಭವಿಸಿದ ಅನರ್ಥ ಅವರ ಮನಸ್ಸನ್ನು ನೋಯಿಸಿತ್ತು. ಪ್ರಬಲವಾದ ಹಿಂದೂ ರಾಜ್ಯ ಸ್ಥಾಪನೆಯೇ ಮುಸಲ್ಮಾನರ ಧಾಳಿಯನ್ನು ತಪ್ಪಿಸಿ ಹಿಂದೂಗಳನ್ನು ರಕ್ಷಿಸುತ್ತದೆಯೆಂದು ಅವರು ನಂಬಿದ್ದರು. ಈ ಸಮಯದಲ್ಲಿ ಹರಿಹರ, ಬುಕ್ಕರ ಉತ್ಸಾಹ, ಶಕ್ತಿ, ಸಾಮರ್ಥ್ಯಗಳನ್ನು ಕಂಡು ಇವರಿಂದ ಹಿಂದೂ ರಾಜ್ಯ ಸ್ಥಾಪನೆಯ ಮಹಾಕಾರ್ಯ ಸಾಧ್ಯವಾಗುತ್ತದೆಯೆಂದು ನಿಶ್ಚಯಿಸಿದರು. ವಿದ್ಯಾರಣ್ಯರಿಗೆ ಆ ಕಾಲದ ರಾಜಕೀಯ ಪರಿಸ್ಥಿತಿಯ ಅರಿವು ಚೆನ್ನಾಗಿತ್ತು. ವಿದ್ಯಾರಣ್ಯರ ಶಿಷ್ಯನಾಗಿ ಹರಿಹರನು ಅವರ ಸಲಹೆಗಳನ್ನು ಪಡೆದನು. ಕ್ಷತ್ರಿಯ ತೇಜಸ್ಸಿಗೆ ಬ್ರಹ್ಮತೇಜಸ್ಸು ಪೂರಕವಾಯಿತು. ವಿದ್ಯಾರಣ್ಯರು ಅವರಿಗೆ ಮಾರ್ಗದರ್ಶಕರಾದರು. ಹಿಂದೂ ಧರ್ಮದ ರಕ್ಷಣೆಗಾಗಿ ಒಂದು ಹೊಸ ಸಾಮ್ರಾಜ್ಯವನ್ನು ಕಟ್ಟಬೇಕೆಂದು ನಿಶ್ಚಯವಾಯಿತು. ಆನೆಗೊಂದಿಗಿಂತ ಅದರ ಸಮೀಪದಲ್ಲಿ ತುಂಗಭದ್ರಾ ನದಿಯ ದಕ್ಷಿಣಕ್ಕಿರುವ ಪ್ರದೇಶವೇ ರಾಜಧಾನಿಗೆ ಯೋಗ್ಯವಾದ ಸ್ಥಳವೆಂದು ನಿರ್ಧರಿಸಲಾಯಿತು. ವಿದ್ಯಾರಣ್ಯರ ನಿರ್ದೇಶನದಲ್ಲಿ ಹರಿಹರನು ಹಂಪೆ ಎಂಬ ಗ್ರಾಮದ ಬಳಿ ಸ್ವರಾಜ್ಯದ ವಿಜಯ ಧ್ವಜವನ್ನು ಸ್ಥಾಪಿಸಿದನು. ಶಾಲಿವಾಹನ ಶಕ 1258ನೇ ಧಾತೃ ಸಂವತ್ಸರ ವೈಶಾಖ ಶುದ್ಧ ಸಪ್ತಮಿಯ ದಿನ ವಿಜಯನಗರದ ಸ್ಥಾಪನೆಯಾಯಿತು. ಇದು ಕ್ರಿ.ಶ. 1336.

ರಾಜ್ಯಭ್ರಷ್ಟರಾಗಿ ಅಲೆದಾಡುತ್ತಿದ್ದ ರಾಜರೂ, ಪಾಳೆಯ

ಗಾರರೂ. ಸೇನಾಪತಿಗಳೂ ಈ ಹೊಸ ರಾಜ್ಯವನ್ನಾಶ್ರಯಿಸಿ ಹರಿಹರನ ನೇತೃತ್ವದಲ್ಲಿ ಒಂದುಗೂಡಿದರು. ಹಂಪೆಯು ವಿಸ್ತೃತವಾಗುತ್ತ ವಿಜಯನಗರವೆಂಬ ಹೆಸರಿಗೆ ಅನ್ವರ್ಥವಾಗಿ ಬೆಳೆಯಿತು. ಸುಮಾರು 230 ವರ್ಷಗಳ ಕಾಲ ಅತ್ಯಂತ ವೈಭವದಿಂದ ಸಾಗಿ ಧರ್ಮಸ್ಥಾಪನೆಯ ಉದ್ದೇಶವನ್ನು ಕೈಗೂಡಿಸಿತು. ವಿದ್ಯಾರಣ್ಯರು ಶೃಂಗೇರಿ ಪೀಠದಲ್ಲಿ ವಿರಾಜಮಾನರಾದರೆಂದೂ ಅವರಿಂದ ಆರಂಭಿಸಿ ಶೃಂಗೇರಿ ಮಠಾಧೀಶರಿಗೆ "ಕರ್ಣಾಟಕ ಸಿಂಹಾಸನ ಸ್ಥಾಪನಾಚಾರ್ಯ ಶ್ರೀಮದ್ರಾಜಾಧಿರಾಜ ರಾಜಗುರು" ಎಂಬ ಬಿರುದು ನಡೆದುಬಂದಿತೆಂದೂ ತಿಳಿದು ಬರುತ್ತದೆ.*

## ಸ್ಥಳದ ಇತಿಹಾಸ

ತುಂಗಭದ್ರಾ ನದಿಯ ದಕ್ಷಿಣತೀರದಲ್ಲಿ ಸ್ಥಾಪಿತವಾದದ್ದು ವಿಜಯನಗರ. ಈ ನದಿಯ ಉತ್ತರದಲ್ಲಿ ಪುರಾತನವಾದ ಆನೆಗೊಂದಿ ಪಟ್ಟಣವಾಗಿತ್ತು. ವಿಜಯನಗರವು ಬೆಳೆದ ಮೇಲೆ ಆನೆಗೊಂದಿಯು ವಿಜಯನಗರದ ಶಾಖಾನಗರವಾಗಿ ಪರಿಣಮಿಸಿತು. ಆನೆಗೊಂದಿಗೆ ಹಸ್ತಿನಾ, ಹಸ್ತಿನಾವತಿ ಎಂದೂ ತಾಮ್ರ ಶಾಸನಗಳಲ್ಲಿ ಹೆಸರು ದೊರೆಯುತ್ತದೆ. ಪರಂಪರಾಗತವಾದ ಸ್ಥಳೀಯ ನಂಬಿಕೆಯಂತೆ ಇಲ್ಲಿಯೇ ರಾಮಾಯಣದಲ್ಲಿ ಹೇಳಿದ ಕಿಷ್ಕಿಂಧೆ ಮತ್ತು ಪಂಪಾಸರೋವರಗಳಿದ್ದವು. ಏಳನೆಯ ಶತಮಾನದ ಚಾಲುಕ್ಯ ವಿನಯಾದಿತ್ಯನ ಒಂದು ತಾಮ್ರಶಾಸನದಲ್ಲಿ ಈ ಸ್ಥಳವನ್ನು ಪಂಪಾಕ್ಷೇತ್ರವೆಂದು ಕರೆಯಲಾಗಿದೆ. ತುಂಗಭದ್ರಾ ನದಿಗೆ

* ವಿಜಯನಗರವನ್ನು ಸ್ಥಾಪಿಸಿದ ಹಕ್ಕಬುಕ್ಕರ ವಿಷಯದಲ್ಲಿ ಇತಿಹಾಸಕಾರರಿಗೆ ಒಮ್ಮತವಿಲ್ಲ. ಇವರು ಓರುಗಲ್ಲಿನ ಯಾದವವಂಶದವರೆಂದು ಕೆಲವರು ಹೇಳುತ್ತಾರೆ.

ಪಂಪಾ ಎಂಬ ಹೆಸರಿದ್ದಂತೆ ಕಂಡುಬರುತ್ತದೆ. ಇಲ್ಲಿಯ ಅಧಿಷ್ಠಾನ ದೇವತೆ ಶ್ರೀ ವಿರೂಪಾಕ್ಷ. ವಿಜಯನಗರದ ರಾಜರು ಈ ಪಂಪಾ ವಿರೂಪಾಕ್ಷನನ್ನು ರಾಜ್ಯದೇವತೆಯೆಂದು ಭಾವಿಸಿ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ವಿರೂಪಾಕ್ಷನಿಗೆ ಒಂದು ಭವ್ಯವಾದ ದೇವಾಲಯುವನ್ನು ನಿರ್ಮಿಸಿದರು. ತಮ್ಮ ಶಾಸನಗಳ ಕೊನೆಯಲ್ಲಿ ಕನ್ನಡ ಅಕ್ಷರಗಳಿಂದ 'ಶ್ರೀ ವಿರೂಪಾಕ್ಷ' ಎಂದು ಅಂಕಿತಗೊಳಿಸುತ್ತಿದ್ದರು. ಸಾಮ್ರಾಜ್ಯವನ್ನಾಳುವ ಅಧಿದೇವತೆ ಶ್ರೀ ವಿರೂಪಾಕ್ಷನೆಂದೂ ತಾವು ಆತನ ಪ್ರತಿನಿಧಿಗಳೆಂದೂ ಈ ಸಾಮ್ರಾಟರು ಭಾವಿಸಿದ್ದರು.

## ಹರಿಹರರಾಯ (ಕ್ರಿ.ಶ. 1336–1356)

ವಿಜಯನಗರದ ಸಾಮ್ರಾಜ್ಯದ ಸ್ಥಾಪನೆಯ ಮಹಾಕಾರ್ಯ ಕ್ರಿ.ಶ. 1336ರಲ್ಲಿ ಆರಂಭವಾಗಿ 1346ರಲ್ಲಿ ಒಂದು ಭದ್ರವಾದ ತಳಹದಿಯನ್ನು ಪಡೆದು ಎದ್ದು ನಿಂತಿತು. ಈ ಹತ್ತು ವರ್ಷಗಳಲ್ಲಿ ಹರಿಹರನು ತನ್ನ ಅಸಾಧಾರಣವಾದ ಸಂಘಟನಾ ಸಾಮರ್ಥ್ಯವನ್ನು ಪ್ರದರ್ಶಿಸಿದನು. ಹಿಂದೂ ಜನಾಂಗದಲ್ಲಿ ಪ್ರಚಂಡವಾದ ಉತ್ಸಾಹವನ್ನು ತುಂಬಿ ಶತ್ರುಗಳ ಆಘಾತವನ್ನು ಹಿಮ್ಮೆಟ್ಟಿಸಿದನು. ದಕ್ಷಿಣದ ಒಂದೊಂದು ರಾಜ್ಯವೂ ಮಹಮ್ಮದೀಯರ ಕೈಬಿಟ್ಟು ವಿಜಯನಗರದ ಸ್ವಾಧೀನಕ್ಕೆ ಬರುತ್ತ ಹೋಯಿತು. ತುಂಗಭದ್ರೆಯ ದಕ್ಷಿಣ ಭಾಗವೆಲ್ಲ ಹರಿಹರನಿಗೆ ಅಧೀನವಾಯಿತು. ಮಧುರೆಯಲ್ಲಿ ಮಾತ್ರ ಸುಲ್ತಾನರ ಹಾವಳಿ ತಪ್ಪಿರಲಿಲ್ಲ, ಹರಿಹರನ ತಮ್ಮ ಬುಕ್ಕನು ದಂಡೆತ್ತಿ ಹೋಗಿ ಸುಲ್ತಾನನನ್ನು ಓಡಿಸಿ ಮಧುರೆಯನ್ನು ವಶಮಾಡಿಕೊಂಡನು. ಅವನು ಹಿಂದಿರುಗಿದ ಮೇಲೆ ಮತ್ತೆ ಅಲ್ಲಿ ಮುಸಲ್ಮಾನರು ಗರಿಗಟ್ಟಿದರು. ಅಂತೂ

ಮಧುರೆಯೊಂದನ್ನು ಹೊರತಾಗಿ ಉಳಿದ ಪ್ರಾಂತಗಳು ವಿಜಯ ನಗರದ ಸಾಮ್ರಾಜ್ಯಕ್ಕೆ ಒಳಪಟ್ಟವು.

ಹರಿಹರನ ತಂದೆ ಸಂಗಮನಾದ್ದರಿಂದ ಈ ರಾಜವಂಶಕ್ಕೆ ಸಂಗಮವಂಶ ಎಂದು ಹೆಸರಾಯಿತು. ಸಂಗಮನ ಮೂಲಸ್ಥಳ ಚಿಕ್ಕಮಗಳೂರು ಜಿಲ್ಲೆಯ ಕಳಸ ಎಂದು ಕೆಲವರು ಹೇಳಿದ್ದಾರೆ.

ಹರಿಹರನಿಗೆ 'ಅರಿರಾಯ ವಿಭಾಡ, ಭಾಷೆಗೆ ತಪ್ಪುವ ರಾಯರ ಗಂಡ, ಪೂರ್ವ-ಪಶ್ಚಿಮ ಸಮುದ್ರಾಧಿಪತಿ, ಮಹಾ ರಾಜಾಧಿರಾಜ, ರಾಜ ಪರಮೇಶ್ವರ, ವೀರ ಪ್ರತಾಪ ಹರಿಹರ ಮಹಾರಾಯ' ಎಂಬ ಬಿರುದುಗಳಿದ್ದವು. ಹಿಂದೂಗಳ ರಕ್ಷಣೆ ಗಾಗಿ ಭದ್ರವಾದ ಅಡಿಗಲ್ಲನ್ನು ಹಾಕಿದ ಕೀರ್ತಿ ಹರಿಹರನಿಗೆ ಸಲ್ಲು ತ್ತದೆ. ದೂರದರ್ಶಿಯೂ ರಾಜನೀತಿ ಚತುರನೂ ಆದ ಈತನು ಸಾವಧಾನದಿಂದ ಹಿಂದೂಗಳನ್ನು ಸಂಘಟಿಸಿ, ಇಪ್ಪತ್ತು ವರ್ಷಗಳ ಕಾಲ ರಾಜ್ಯವಾಳಿ 1356ರಲ್ಲಿ ಕಾಲಾಧೀನನಾದನು. ಇವನ ಮಗ ನಾದ ಸೋಮಣನೂ ಹಿರಿಯ ತಮ್ಮನಾದ ಕಂಪಣನೂ ಮೊದಲೇ ತೀರಿಹೋಗಿದ್ದರು. ಆದ್ದರಿಂದ ಬುಕ್ಕರಾಯನು ವಿಜಯನಗರದ ಸಿಂಹಾಸನವನ್ನೇರಿದನು.

## ಬುಕ್ಕರಾಯ (1356–1376)

ಅಣ್ಣನಾದ ಹರಿಹರನಿಗೆ ಈತನು ಮೊದಲಿನಿಂದಲೂ ಹೆಗಲಿಗೆ ಹೆಗಲುಕೊಟ್ಟು ದುಡಿದು ವಿಜಯನಗರದ ಸ್ಥಾಪನೆಗೆ ಕಾರಣನಾಗಿದ್ದನು. ಈತನು ತನ್ನ ಸಾಹಸ ಪರಾಕ್ರಮಗಳಿಂದ ಸಾಮ್ರಾಜ್ಯವನ್ನು ವಿಸ್ತರಿಸಿದನು. ವಿಜಯನಗರವನ್ನು ಕೋಟೆ ಕೊತ್ತಲುಗಳಿಂದ ಭದ್ರಪಡಿಸಿ ಪ್ರಜಾಕ್ಷೇಮಕರವಾದ ಹಲವಾರು ಕಾರ್ಯಗಳನ್ನು ಕೈಗೊಂಡನು. ಬುಕ್ಕರಾಯ ಸಮುದ್ರ, ಕೀರ್ತಿ

ಸಮುದ್ರ, ಮಲ್ಲಪ್ಪನ ಕೆರೆ ಮುಂತಾದ ಕೆರೆಗಳನ್ನು ಕಟ್ಟಿಸಿ, ಕಾಲುವೆಗಳನ್ನು ತೋಡಿಸಿ, ಕೃಷಿಗೆ ಸರ್ವತೋಮುಖವಾದ ಪ್ರಗತಿಯನ್ನುಂಟುಮಾಡಿದನು. ರಾಜ್ಯದಲ್ಲಿ ಕಳ್ಳಕಾಕರ ಹಾವಳಿಯನ್ನು ನಿರ್ಮೂಲ ಮಾಡಿದನು. ನ್ಯಾಯ ಧರ್ಮಗಳೇ ಅವನ ಆಡಳಿತಕ್ಕೆ ಮಾರ್ಗದರ್ಶಿಗಳಾಗಿದ್ದವು. ಪರಕೀಯರ ಹಿಂಸೆ ಕೀಟಲೆಗಳು ಈತನ ಆಳ್ವಿಕೆಯಲ್ಲಿ ಸಂಪೂರ್ಣವಾಗಿ ತಪ್ಪಿದವು. ಪ್ರಜೆಗಳು ನೆಮ್ಮದಿಯಲ್ಲಿದ್ದರು. ಬಹು ವರ್ಷಗಳ ಮೇಲೆ ಸುಖ ಶಾಂತಿಗಳನ್ನು ಕಂಡ ಜನರು ಬುಕ್ಕರಾಜನನ್ನು ಸಾಕ್ಷಾತ್ ವಿರೂಪಾಕ್ಷ ಸ್ವಾಮಿಯ ಪ್ರತಿನಿಧಿಯೆಂದು ಭಾವಿಸಿ ಆತನನ್ನು ಬಹಳ ಗೌರವದಿಂದಲೂ ರಾಜಭಕ್ತಿಯಿಂದಲೂ ಕಾಣುತ್ತಿದ್ದರು. ವಿಜಯನಗರ ಸಾಮ್ರಾಜ್ಯದ ಅಭಿವೃದ್ಧಿಗೆ ಇವನ ಕಾಣಿಕೆ ಅಮೂಲ್ಯವಾದುದು. ಬುಕ್ಕನು ಸ್ವತಃ ವೀರಯೋಧನಾಗಿದ್ದು ಮುಸ್ಲಿಮರೊಡನೆ ನಡೆದ ಹೋರಾಟಗಳಲ್ಲಿ ಜಯದ ಮೇಲೆ ಜಯವನ್ನು ಗಳಿಸಿ ಕೀರ್ತಿಶಾಲಿಯಾದನು.

ತನ್ನ ರಾಜ್ಯದಲ್ಲಿ ಶಾಂತಿಯು ನೆಲೆಸಿದ ಮೇಲೆ ಬುಕ್ಕರಾಯನು ಸಾಂಸ್ಕೃತಿಕವಾದ ನಾನಾ ಕಾರ್ಯಗಳನ್ನು ಕೈಗೊಂಡನು. ಇವುಗಳಲ್ಲಿ ಮುಖ್ಯವಾದದ್ದೆಂದರೆ ವೇದಗಳಿಗೆ ಭಾಷ್ಯವನ್ನು ಬರೆಸಿದ್ದು. ವಿದ್ಯಾರಣ್ಯರ ಸೋದರರಾದ ಸಾಯಣಾಚಾರ್ಯರಿಂದ ನಾಲ್ಕು ವೇದಗಳಿಗೂ ಭಾಷ್ಯವನ್ನು ಬರೆಸಿದನು. ಇದೊಂದು ಈತನು ಮಾಡಿದ ಅಸಾಧಾರಣವಾದ ಕಾರ್ಯ. ಇದರಿಂದ ಬುಕ್ಕರಾಯನಿಗೆ 'ವೈದಿಕಮಾರ್ಗ ಪ್ರವರ್ತಕ' ಎಂಬ ಬಿರುದು ಲಭಿಸಿತು. ಹಿಂದೂಗಳಿಗೆ ಒಂದು ನೆಮ್ಮದಿಯನ್ನು ದೊರಕಿಸಿಕೊಟ್ಟ ಈ ರಾಯನಿಗೆ 'ಹಿಂದೂಧರ್ಮ ಸುರತ್ರಾಣ' ಎಂಬ ಬಿರುದು ಬಂದಿತು.

ಬುಕ್ಕರಾಯನು ವೈದಿಕಧರ್ಮದವನಾಗಿದ್ದರೂ ಇವನ

ರಾಜ್ಯದಲ್ಲಿ ಎಲ್ಲ ಧರ್ಮದವರಿಗೂ ಸಮಾನವಾದ ರಕ್ಷಣೆ ಇದ್ದಿತು. ಇದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು. ರಾಮಾನುಜ ಮತೀಯರಾದ ಶ್ರೀವೈಷ್ಣವರಿಗೂ ಜೈನರಿಗೂ ಒಮ್ಮೆ ದೊಡ್ಡ ಜಗಳ ಉಂಟಾಯಿತು. ಈ ದೂರನ್ನು ಪರಿಶೀಲಿಸುವುದಕ್ಕಾಗಿ ರಾಜನು ಒಂದು ಸಭೆಯನ್ನೇರ್ಪಡಿಸಿ ಎಲ್ಲ ಮತದ ಮುಖಂಡ



ಜೈನರ ಕೈಯನ್ನು ಶ್ರೀವೈಷ್ಣವರ ಕೈಯಲ್ಲಿಟ್ಟು...

ರನ್ನೂ ಸಭೆಗೆ ಕರೆಸಿದನು. ಅವರ ಹೇಳಿಕೆಗಳನ್ನು ಪರಿಶೀಲಿಸಿದ ಮೇಲೆ ಬುಕ್ಕರಾಯನು ಸಿಂಹಾಸನದಿಂದ ಇಳಿದು ಬಂದು ಜೈನರ ಕೈಯನ್ನು ಶ್ರೀವೈಷ್ಣವರ ಕೈಯಲ್ಲಿಟ್ಟು ಗದ್ಗದ ಕಂಠದಿಂದ ಹೀಗೆಂದನು : "ವೈಷ್ಣವರಿಗೂ ಜೈನರಿಗೂ ಭೇದವನ್ನು ಬಗೆಯ ಲಾಗದು. ನನ್ನ ರಾಜ್ಯದಲ್ಲಿ ಎಲ್ಲ ಮತದ ಪ್ರಜೆಗಳಿಗೂ ಸಮಾನ ವಾದ ಅಧಿಕಾರ ಉಂಟು. ಜೈನರು ಎಂದಿನಂತೆ ಪಂಚಮಹಾ ವಾದ್ಯ, ಕಳಸ ಮುಂತಾದ ಧಾರ್ಮಿಕ ವಿಧಿಗಳನ್ನು ನಡೆಸಿಕೊಂಡು ಹೋಗಬಹುದು. ಜೈನಮತದ ಹಾನಿ ವೃದ್ಧಿಗಳೇ ಶ್ರೀವೈಷ್ಣವ ಮತದ ಹಾನಿವೃದ್ಧಿ. ಶ್ರೀವೈಷ್ಣವಮತದ ಹಾನಿ ವೃದ್ಧಿಗಳೇ ಜೈನ ಮತದ ಹಾನಿ ವೃದ್ಧಿ. ಚಂದ್ರ ಸೂರ್ಯರಿರುವವರೆಗೆ ಜೈನಮತ ವನ್ನು ಸಂರಕ್ಷಿಸುವ ಹೊಣೆ ಶ್ರೀವೈಷ್ಣವರ ಮೇಲೆ ಇರುವುದು. ವಿಧರ್ಮೀಯರಾದ ಮುಸಲ್ಮಾನರಿಗೂ ಕ್ರೈಸ್ತರಿಗೂ ಸಹ ನನ್ನ ರಾಜ್ಯದಲ್ಲಿ ರಕ್ಷಣೆಯನ್ನು ನೀಡಲಾಗುವುದು." ಹೀಗೆ ತೀರ್ಪಿತ್ತು ಬೇರೆ ಬೇರೆ ಸ್ಥಳಗಳಲ್ಲಿ ಈ ವಿಷಯವಾಗಿ ರಾಜಶಾಸನಗಳನ್ನು ಬರೆಸಿ ನಿಲ್ಲಿಸಿದನು.

## ವೀರ ಕಂಪಣರಾಯ

ಕಂಪಣರಾಯನು ಬುಕ್ಕರಾಯನ ಮಗ. ಈತನ ಹೆಸರಿ ನೊಂದಿಗೆ ಸೇರಿಕೊಂಡಿರುವ 'ವೀರ' ಎಂಬ ಶಬ್ದವೇ ಕಂಪಣ ರಾಯನು ಮಹಾವೀರನಾಗಿದ್ದನೆಂದು ಸೂಚಿಸುತ್ತದೆ. ಇವನು ರಾಜಕಾರ್ಯ ದಕ್ಷನೂ ಒಳ್ಳೆಯ ಆಡಳಿತಗಾರನೂ ಆಗಿದ್ದನಲ್ಲದೆ ಧರ್ಮನಿಷ್ಠನೂ ಪ್ರಜೆಗಳ ಕ್ಷೇಮವನ್ನು ಚಿಂತಿಸತಕ್ಕವನೂ ಆಗಿ ದ್ದನು. ಇವನು ಬುಕ್ಕರಾಯನಿಗೆ ತಕ್ಕ ಮಗನೆಂಬುದರಲ್ಲಿ ಸಂದೇಹ ವಿಲ್ಲ. ಬುಕ್ಕರಾಯನಿಗೆ ರಾಜ್ಯಭಾರದಲ್ಲಿ ಬಲಗೈಯಂತೆ ನೆರವು

ನೀಡಿ ಅವನ ಪ್ರೀತಿವಿಶ್ವಾಸಗಳಿಗೆ ಪಾತ್ರನಾಗಿದ್ದನು. ಬುಕ್ಕ ರಾಯನು ಕಂಪಣನನ್ನು ಮುಳಬಾಗಿಲು ಪ್ರದೇಶಕ್ಕೆ ಮಹಾ ಮಾಂಡಲಿಕನನ್ನಾಗಿ ನೇಮಿಸಿದ್ದನೆಂದೂ ತುಂಡೀರಮಂಡಲದ ಚಂಪರಾಯನ ದಂಗೆಯನ್ನು ಅಡಗಿಸಿ ಮಧುರೆಯ ಸುಲ್ತಾನನನ್ನು ಜಯಿಸಿ ಅವನ ದುರಾಡಳಿತವನ್ನು ಕೊನೆಗಾಣಿಸಬೇಕೆಂದೂ ತಿಳಿಸಿದ್ದನು. ಆದರಂತೆ ವೀರಕಂಪಣನು ತನ್ನ ಕರ್ತವ್ಯವನ್ನು ನೆರವೇರಿಸಿ ಆ ಪ್ರಾಂತಗಳಲ್ಲಿ ಶಾಂತಿಯನ್ನು ನೆಲೆಗೊಳಿಸಿದನೆಂದೂ ಇತಿಹಾಸದಿಂದ ತಿಳಿದು ಬರುತ್ತದೆ. ಮುಖ್ಯವಾಗಿ ಕಂಪಣನ ಕಾರ್ಯಕ್ಷೇತ್ರ ತಮಿಳುನಾಡು. ಆತನಿಗೆ ಸಂಬಂಧಿಸಿದಂತೆ ಅವನ ಕಾಲದ 132 ಶಾಸನಗಳು ದೊರಕಿವೆ.

ಇಷ್ಟಾದರೂ ವೀರ ಕಂಪಣರಾಯನ ಜೀವಿತದ ವಿವರಗಳು ನಮಗೆ ಸರಿಯಾಗಿ ದೊರೆಯುವುದಿಲ್ಲ. ಅವನ ಜನನ ಮರಣಗಳು ಯಾವ ಸಂವತ್ಸರಗಳಲ್ಲಿ ಎಂಬುದೂ ಸ್ಪಷ್ಟವಾಗಿ ತಿಳಿಯುವುದಿಲ್ಲ. ಮಧುರಾವಿಜಯ' ಅಥವಾ ವೀರ ಕಂಪಣರಾಯ ಚರಿತ ಎಂಬ ಸಂಸ್ಕೃತ ಕಾವ್ಯವು ದೊರಕಿದ ಮೇಲೆ ಕೆಲವು ಹೆಚ್ಚಿನ ಅಂಶಗಳು ದೊರಕಿದವು. ಇತಿಹಾಸದಲ್ಲಿ ಇವನನ್ನು ಕುಮಾರಕಂಪಣ ಎಂದು ಕರೆಯುವುದು ರೂಢಿಯಾಗಿದೆ.

## ಮಧುರಾವಿಜಯ ಅಥವಾ ವೀರ ಕಂಪಣರಾಯ ಚರಿತ

ಈ ಸಂಸ್ಕೃತ ಕಾವ್ಯವನ್ನು ವೀರ ಕಂಪಣನ ರಾಣಿಯಾದ ಗಂಗಾದೇವಿಯು ರಚಿಸಿದ್ದಾಳೆ. ಇದು 9ನೆಯ ಸರ್ಗದ 42ನೆಯ ಶ್ಲೋಕದವರೆಗೆ ಇದೆ. ಮಧುರೆಯ ಸುಲ್ತಾನನನ್ನು ಗೆದ್ದಿರುವ ವರೆಗೆ ಕಥೆ ಇದೆ. ಕಡೆಯ ಶ್ಲೋಕಗಳನ್ನು ಪರಿಶೀಲಿಸಿದರೆ ಇನ್ನೂ ಕಥಾಭಾಗವಿತ್ತೆಂದು ಗೊತ್ತಾಗುತ್ತದೆ. ಈಗ ದೊರಕಿರುವ ಈ

ಕಾವ್ಯದಲ್ಲಿಯೂ ನಡುನಡುವೆ ಬಹಳ ಶ್ಲೋಕಗಳು ಲುಪ್ತವಾಗಿವೆ. ಆದರೂ ಕಂಪಣನ ಚರಿತ್ರೆಗೆ ಸಂಬಂಧಿಸಿದಂತೆ ಕೆಲವು ವಿಷಯ ಸಾಮಗ್ರಿಗಳು ದೊರೆಯುವುದರಿಂದ ಇದೊಂದು ಅಮೂಲ್ಯವಾದ ಕೃತಿಯೆಂದು ಹೇಳಬಹುದು.

ಕಾವ್ಯದೃಷ್ಟಿಯಿಂದ ನೋಡಿದರೆ ಮಧುರಾವಿಜಯವು ತುಂಬ ಸುಂದರವಾದ ಕಾವ್ಯವೇ ಹೌದು. ಗಂಗಾದೇವಿಯ ಕವಿತಾಶಕ್ತಿ, ವರ್ಣನಾಕೌಶಲ ಮೆಚ್ಚತಕ್ಕದ್ದು. ಇದು ಐತಿಹಾಸಿಕ ಕಾವ್ಯ. ಕಾವ್ಯಶೈಲಿಯಂತೆ ಅತಿಶಯೋಕ್ತಿಯ ವರ್ಣನೆಗಳು ಬರುವುದು ಸಹಜ. ಆದರೂ ಇತಿಹಾಸದ ಎಳೆಯನ್ನು ನಾವು ಸುಲಭವಾಗಿ ಗುರುತಿಸಬಹುದು. ಗಂಗಾದೇವಿಯು ಕಂಪಣ ರಾಯನ ಮಡದಿಯಾಗಿದ್ದು, ಆಗ ನಡೆದ ಸಂಗತಿಗಳನ್ನು ಸ್ವತಃ ಕಂಡವಳಾದ್ದರಿಂದ ಅವಳ ಹೇಳಿಕೆಗೆ ಹೆಚ್ಚಿನ ಮೌಲ್ಯ ದೊರಕುತ್ತದೆ. ಗಂಗಾದೇವಿಯ ಹೇಳಿಕೆಗಳನ್ನೂ ಇತಿಹಾಸಕಾರರ ನುಡಿಗಳನ್ನೂ ಜೊತೆ ಜೊತೆಯಾಗಿ ಸೇರಿಸಿ ವೀರ ಕಂಪಣರಾಯ ಚರಿತೆಯನ್ನು ಹೆಣೆಯಲು ಪ್ರಯತ್ನಿಸಲಾಗಿದೆ.

ಬುಕ್ಕರಾಯನು ಕ್ರಿ.ಶ. 1376ರಲ್ಲಿ ಸ್ವರ್ಗಸ್ಥನಾದ. ಅವನಿಗಿಂತ ಒಂದೆರಡು ವರ್ಷ ಮೊದಲೇ ಕಂಪಣನು ಮೃತನಾದನೆಂದು ಚರಿತ್ರಕಾರರು ಹೇಳುತ್ತಾರೆ. ಆಗ ಕಂಪಣನಿಗೆ ಕನಿಷ್ಠ 40 ವರ್ಷಗಳಾಗಿದ್ದವೆಂದು ಇಟ್ಟುಕೊಂಡರೂ ಅವನ ಜನ್ಮಕಾಲ ಕ್ರಿ. ಶ. 1336ಕ್ಕಿಂತ ಹಿಂದೆ ಆಗುತ್ತದೆ. ಕಂಪಣನು ಹುಟ್ಟಿದಾಗ ಒಂದು ವೇಳೆ ವಿಜಯನಗರದ ಸ್ಥಾಪನೆಯಾಗಿದ್ದರೂ ಹರಿಹರನು ರಾಜನಾಗಿದ್ದನೇ ಹೊರತು ಬುಕ್ಕನಲ್ಲ. ಬುಕ್ಕನು ವಿಜಯನಗರದ ಅಧಿಪತಿಯೆಂದು ಗಂಗಾದೇವಿ ಕಥೆಯನ್ನಾರಂಭಿಸುತ್ತಾಳೆ. ಅದಕ್ಕೆ ಕಾರಣವಿಷ್ಟೆ : ಕಂಪಣನು ಮಧುರೆಯನ್ನು ವಶಪಡಿಸಿಕೊಂಡ ಮೇಲೆ ಗಂಗಾದೇವಿ ತನ್ನ ಕಾವ್ಯವನ್ನು ರಚಿಸಿದ್ದಾಳೆ. ಆ ಸಮಯ

ದಲ್ಲಿ ಬುಕ್ಕನು ವಿಜಯನಗರದ ಸಾಮ್ರಾಟನಾಗಿದ್ದ. ಆದ್ದರಿಂದ ಗಂಗಾದೇವಿ ಹಿಂದಿನ ಸಂಗತಿಯನ್ನು ಉಪೇಕ್ಷಿಸಿ ಕಾವ್ಯೋಚಿತವಾಗಿ ಬುಕ್ಕರಾಜನಿಂದ ಕಥೆಯನ್ನು ಆರಂಭಿಸಿದ್ದಾಳೆ.

ಹರಿಹರನ ತಮ್ಮನಾದ ಬುಕ್ಕರಾಜನು ವಿಜಯನಗರ ಸಾಮ್ರಾಜ್ಯಧ ಅಧಿಪತಿ. ಹಲವಾರು ಸಾಮಂತರಾಜರು ಅವನಿಗೆ ಅಧೀನರಾಗಿ ಕಪ್ಪಕಾಣಿಕೆಗಳನ್ನು ಸಲ್ಲಿಸುತ್ತಿದ್ದರು. ಬುಕ್ಕರಾಜನು ಒಳ್ಳೆಯ ತೇಜಸ್ವಿಯೂ ಕ್ಷಮಾಶೀಲನೂ ಗಂಭೀರ ಸ್ವಭಾವದವನೂ ಆಗಿದ್ದನು. ಅವನು ಮಹಾಶೂರ, ಕೀರ್ತಿಶಾಲಿ, ನಶಿಸಿಹೋಗು ತ್ತಿದ್ದ ಧರ್ಮವನ್ನು ಮತ್ತೆ ಸ್ಥಾಪಿಸಿದ ಮಹಾನುಭಾವ. ಅವನಲ್ಲಿ ಪ್ರಬಲವಾದ ಗಜಸೇನೆಯೂ ಅಶ್ವಸೇನೆಯೂ ಇದ್ದವು. ಬುಕ್ಕ ರಾಯನ ರಾಜಧಾನಿ ವಿಜಯಾ. ಸಂಗಮಪುತ್ರರು ಶತ್ರುಗಳನ್ನು ಜಯಿಸಿ ವಿಜಯಬಲದಿಂದ ಸ್ಥಾಪಿಸಿದರಾದ್ದರಿಂದ ವಿಜಯಾಪುರ, ವಿಜಯನಗರ ಎಂಬ ಹೆಸರು ಅದಕ್ಕೆ ಅನ್ವರ್ಥವಾಗಿತ್ತು. ತುಂಗಭದ್ರಾನದಿಯು ನಗರದ ರಕ್ಷಣೆಗಾಗಿ ತೋಡಿರುವ ಪರಿಕೆ ಯಂತೇ ಇದ್ದಿತು. ಈ ನಗರಕ್ಕೆ ಬಲವಾದ ಕೋಟೆ ಇತ್ತು. ಎತ್ತರವಾದ ದಿಡ್ಡಿ ಬಾಗಿಲುಗಳಿದ್ದವು. ಪಟ್ಟಣದಲ್ಲಿ ಎತ್ತರವಾದ ಮಹಡಿಯ ಮನೆಗಳು ಸಾಲುಸಾಲಾಗಿ ಶೋಭಿಸುತ್ತಿದ್ದವು. ನಗರ ದೊಳಗೆ ಅಲ್ಲಲ್ಲಿ ಹೂವಿನ ತೋಟಗಳೂ ವಿಶಾಲವಾದ ಕೊಳಗಳೂ ವಿಪುಲವಾಗಿದ್ದವು.

ಬುಕ್ಕರಾಜನ ಪ್ರಜಾವಾತ್ಸಲ್ಯವನ್ನೂ ಧರ್ಮನಿಷ್ಠೆಯನ್ನೂ ಕಂಡು ಜನಗಳು ಮನುರಾಜನೇ ಅವತರಿಸಿ ಬಂದಿದ್ದಾನೋ ಎಂದು ಭಾವಿಸಿದ್ದರು. ಬುಕ್ಕರಾಜನು 'ಕರ್ಣಾಟಲೋಕನಯ ನೋತ್ಸವ ಪೂರ್ಣಚಂದ್ರ' ಎಂದರೆ ಕನ್ನಡದೇಶದ ಜನರ ಕಣ್ಣಿಗೆ ಪೂರ್ಣಚಂದ್ರನಂತೆ ಆನಂದವನ್ನುಂಟುಮಾಡುತ್ತಿದ್ದನು. ಅವನು ಅತ್ಯಂತ ಉದಾರಿ. ವಿದ್ಯಾಪ್ರೇಮಿ, ಶಿವಭಕ್ತ. ವಿಂಧ್ಯದಿಂದ

ರಾಮೇಶ್ವರದವರೆಗೆ ಮತ್ತು ಪೂರ್ವಪಶ್ಚಿಮ ಸಮುದ್ರಗಳ ನಡುವೆ ಇರುವ ರಾಜ್ಯ ಈತನ ವಶದಲ್ಲಿತ್ತು. ರಾಜಧಾನಿಯಾದ ವಿಜಯನಗರದ ಶಾಖಾನಗರ ಹಂಪೆ. ಹಂಪೆಯ ವಿರೂಪಾಕ್ಷ ದೇವಾಲಯ ಸುಪ್ರಸಿದ್ಧವಾದುದು.

ಬುಕ್ಕರಾಯನಿಗೆ ಅನೇಕ ಪತ್ನಿಯರಿದ್ದರೆಂದೂ ಆವರಲ್ಲಿ ದೇವಾಯಿ ಎಂಬುವಳು ರಾಯನಿಗೆ ಪರಮಪ್ರಿಯಳಾಗಿದ್ದಳೆಂದೂ ಗಂಗಾದೇವಿ ಹೇಳುತ್ತಾಳೆ. ಅವಳು ವರ್ಣಿಸುವ ರೀತಿಯನ್ನು ನೋಡಿದರೆ ದೇವಾಯಿಯು ಬುಕ್ಕನ ಪಟ್ಟದ ರಾಣಿಯೆಂದು ತೋರುತ್ತದೆ. ದೇವಾಯಿಯ ಹಿರಿಯ ಮಗನೇ ವೀರಕಂಪಣ. ಇವನು ಮಗುವಾಗಿದ್ದಾಗಲೇ ಬಹಳ ಸುಂದರನಾಗಿದ್ದನೆಂದೂ, ಇವನ ಎದೆಯ ಮೇಲೆ ಒಂದು ಕಪ್ಪು ಮಚ್ಚೆ ಇತ್ತೆಂದೂ, ಅದು ಮಹಾವಿಷ್ಣುವಿಗೆ ಶ್ರೀವತ್ಸವೆಂಬ ಚಿಹ್ನೆ ಇದ್ದಂತೆ ಎಂದೂ ಗಂಗಾ ದೇವಿ ಹೇಳಿದ್ದಾಳೆ: "ಈ ಬಾಲಕನಿಗೆ ಕಂಪನ ಎಂದು ಹೆಸರಿಟ್ಟರು. ಈತನು ಮುಂದೆ ಸಮಸ್ತ ಶತ್ರುಗಳನ್ನೂ ಕಂಪನಗೊಳಿಸುತ್ತಾನೆ–ನಡುಗಿಸುತ್ತಾನೆ. ಆದ್ದರಿಂದ ಕಂಪನ ಎಂಬುದು ಅನ್ವರ್ಥವಾದ ಹೆಸರು" ಎಂದು ಗಂಗಾದೇವಿಯ ಹೇಳಿಕೆ. ಕಂಪಣ, ಕಂಪ ಒಡೆಯರು, ಕಂಪಣ್ಣ ಎಂದೇ ಶಾಸನಗಳಲ್ಲಿ ಹೆಸರು ದೊರೆಯುವುದರಿಂದ 'ಕಂಪನ' ಎಂಬುದು ಕವಯಿತ್ರಿಯ ಚಮತ್ಕಾರದ ವರ್ಣನೆಯಷ್ಟೆ. ಕಂಪಣನ ತರುವಾಯ ದೇವಾಯಿಗೆ ಇಬ್ಬರು ಗಂಡು ಮಕ್ಕಳಾದರು. ಅವರಿಬ್ಬರಲ್ಲಿ ಹಿರಿಯನಿಗೆ ಕಂಪಣ ಎಂದೇ ಹೆಸರಿಟ್ಟರು. ಇನ್ನೊಬ್ಬನು ಸಂಗಮ. ಇಬ್ಬರು ಮಕ್ಕಳಿಗೆ ಕಂಪಣ ಎಂಬ ಒಂದೇ ಹೆಸರನ್ನಿಟ್ಟಿದ್ದೇಕೆಂಬುದು ತಿಳಿಯುವುದಿಲ್ಲ. ಮೊದಲನೆಯವನನ್ನು ಹಿರಿಯ ಕಂಪಣನೆಂದೂ ಎರಡನೆಯವನನ್ನು ಕಿರಿಯ ಕಂಪಣನೆಂದೂ ಕರೆಯುತ್ತಿದ್ದರು. ಈ ಇಬ್ಬರು ಕಂಪಣರಲ್ಲದೆ ಬುಕ್ಕರಾಜನ ಅಣ್ಣನಾದ ಕಂಪಣನೊಬ್ಬನಿದ್ದನು.

ಹರಿಹರನಿಗಿಂತ ಮೊದಲೇ ಅವನು ಮೃತನಾದ್ದರಿಂದ ಬುಕ್ಕನು ಸಿಂಹಾಸನವನ್ನೇರಿದನು. ಬುಕ್ಕನ ಮಗ ಹಿರಿಯ ಕಂಪಣನೇ ನಮ್ಮ ವೀರಕಂಪಣರಾಯ.

ಕಂಪಣನು ಬುದ್ಧಿಶಾಲಿಯಾದ್ದರಿಂದ ಅವನ ವಿದ್ಯಾಭ್ಯಾಸ ಚೆನ್ನಾಗಿ ನಡೆಯಿತು. ಆ ಕಾಲದಲ್ಲಿ ರಾಜಪುತ್ರರು ಯುದ್ಧವಿದ್ಯೆಯಲ್ಲಿ ಪಳಗಿರಬೇಕಾಗಿತ್ತು. ಕತ್ತಿವರಸೆ, ಬಾಣ ಹೊಡೆಯುವುದು ಕುದುರೆ ಸವಾರಿ, ಮಲ್ಲಯುದ್ಧಗಳಲ್ಲಿ ಕಂಪಣನು ನಿಷ್ಣಾತನಾದನು. ಯುದ್ಧಶಿಕ್ಷಣದಲ್ಲಿ ಅವನಿಗೆ ಉತ್ತಮವಾದ ತರಬೇತಿ ಸಿಕ್ಕಿತು. ಅವನ ಶರೀರವೂ ಬಲಿಷ್ಠವಾಗಿ ರಾಜತೇಜದಿಂದ ಬೆಳಗುತ್ತಿತ್ತು. ಕಂಪಣನಿಗೆ ವಿವಾಹಯೋಗ್ಯವಾದ ವಯಸ್ಸಾಗಲು ತಂದೆ ಬುಕ್ಕರಾಜನು ಅವನಿಗೆ ಮದುವೆ ಮಾಡಿಸಿದನು. ಗಂಗಾದೇವಿ ಹೇಳುವಂತೆ ಅನೇಕ ರಾಜಪುತ್ರಿಯರೊಡನೆ ಕಂಪಣನ ವಿವಾಹವಾಯಿತು. ಆ ರಾಜಪುತ್ರಿಯರಲ್ಲಿ ಒಬ್ಬಳು ಕಂಪಣನಿಗೆ ಅತ್ಯಂತ ಪ್ರೀತಿಪಾತ್ರಳಾಗಿದ್ದಳು. ಅವಳು ಯಾರು ? ಅವಳ ಹೆಸರನ್ನು ಹೇಳಬೇಕಾದ ಸಂದರ್ಭದಲ್ಲಿ ಮಧುರಾವಿಜಯದ ಮೂರನೆಯ ಸರ್ಗದ ಹದಿನೆಂಟನೆಯ ಶ್ಲೋಕ ತ್ರುಟಿತವಾಗಿದೆ. ಬಹುಶಃ ಅವಳು ಗಂಗಾದೇವಿಯೇ ಆಗಿರಬೇಕು !

ಈ ಸಂದರ್ಭದಲ್ಲಿ ಆಗಿನ ರಾಜಕೀಯ ಪರಿಸ್ಥಿತಿಯನ್ನು ಸ್ವಲ್ಪ ಅವಲೋಕಿಸಬೇಕಾಗುತ್ತದೆ. ಬುಕ್ಕರಾಯನು ವಿಜಯನಗರದ ಆಡಳಿತಸೂತ್ರವನ್ನು ಹಿಡಿದಮೇಲೆ, ಯವನರು ದಕ್ಷಿಣ ಭಾರತದಲ್ಲಿ ಹಾವಳಿ ಮಾಡುವುದನ್ನು ತಡೆಯಲು ತುಂಬ ಪ್ರಯತ್ನವನ್ನು ನಡೆಸಿದ್ದರು. ಉತ್ತರದ ಗುಲ್ಬರ್ಗದಲ್ಲಿ ಮುಸಲ್ಮಾನರ ಬಹಮನಿ ರಾಜ್ಯವು ಸ್ಥಾಪಿತವಾಗಿತ್ತು. ಅದು ಪ್ರಬಲವಾಗಿಯೂ ಇತ್ತು. ಆಗ ಮಹಮ್ಮದ್ ಷಾ ಎಂಬುವನು ಬಹಮನಿ ರಾಜ್ಯವನ್ನಾಳುತ್ತಿದ್ದನು. ಅವನಿಗೆ ಎದುರಾಗಿ ಅವನ ದಾಳಿಯ

ಯನ್ನೆದುರಿಸಬಲ್ಲ ಹಿಂದೂ ರಾಜ್ಯಗಳೆಂದರೆ ಒಂದು ವಿಜಯ ನಗರ, ಇನ್ನೊಂದು ಕಾಪನಾಯಕನ ಆಳ್ವಿಕೆಯಲ್ಲಿದ್ದ ಓರಂಗಲ್ಲು. ಇವೆರಡರಲ್ಲಿ ವಿಜಯನಗರವೇ ನವೀನ ಯುದ್ಧತಂತ್ರಗಳನ್ನು ಬಳಸಿಕೊಂಡು ಬಲಿಷ್ಠವಾಗಿದ್ದ ರಾಜ್ಯ. ಬುಕ್ಕನಿಗೂ ಬಹಮನಿಯ ಮಹಮ್ಮದ್ ಷಾನಿಗೂ ಕೆಲವು ಹೋರಾಟಗಳು ನಡೆದು ಒಂದು ಒಪ್ಪಂದದಲ್ಲಿ ಪರ್ಯವಸಾನವಾಯಿತು. ಆದರಿಂದ ಕೃಷ್ಣಾ ನದಿಯ ದಕ್ಷಿಣ ಭಾಗವೆಲ್ಲ ವಿಜಯನಗರಕ್ಕೆ ಸೇರಿತು. ಕ್ರಿ.ಶ. 1365ರಲ್ಲಿ ಈ ಒಪ್ಪಂದವಾಗಿ ಬಹಮನಿ ರಾಜ್ಯದೊಡನಿದ್ದ ಕಾದಾಟ ನಿಂತಿತು. ದಕ್ಷಿಣ ಮಧುರೆಯನ್ನು ಹಿಂದೆ ಮಹಮ್ಮದ್ ಬಿನ್ ತೊಗಲಕನು ವಶಪಡಿಸಿಕೊಂಡು ಅದನ್ನಾಳಲು ತನ್ನ ಪ್ರತಿನಿಧಿಯನ್ನು ನೇಮಿಸಿದ್ದನು. ಈ ಮಧುರೆಯ ಸುಲ್ತಾನಗಿರಿಯಲ್ಲಿ ಅನೇಕ ಒಳಸಂಚುಗಳು ನಡೆದವು. ಜಲಾಲುದ್ದೀನ್ ಎಂಬ ಸುಲ್ತಾನನು ದಿಲ್ಲಿಯ ಪ್ರಭುತ್ವವನ್ನು ಪ್ರತಿಭಟಿಸಿ ಸ್ವತಂತ್ರನಾಗಿ ವರ್ತಿಸತೊಡಗಿದನು. ಒಬ್ಬರನ್ನೊಬ್ಬರು ಕೊಂದು ಆಡಳಿತವನ್ನು ಕೈಗೆ ತೆಗೆದುಕೊಳ್ಳುತ್ತಿದ್ದ ಈ ಸುಲ್ತಾನರು ಅತ್ಯಂತ ಕ್ರೂರಿಗಳಾಗಿ ಹಿಂದೂಗಳಿಗೆ ಭಾರಿ ಉಪಟಳವನ್ನು ಕೊಡುತ್ತಿದ್ದರು.

ಆ ಸಮಯದಲ್ಲಿ ಮಧುರೆಗೆ ಹತ್ತಿರವಿದ್ದ ಹಿಂದೂ ರಾಜ್ಯವೆಂದರೆ ಕಾಂಚೀ ರಾಜ್ಯ. ಆದಕ್ಕೆ ತುಂಡೀರ ಮಂಡಲ ಅಥವಾ ತೋಂಡಮಂಡಲ ಎಂದು ಹೆಸರಿತ್ತು. ಅದನ್ನಾಳುತ್ತಿದ್ದವರು ಶಂಭು ವಂಶದವರು. ಅವರಿಗೆ ಶಾಂಭವರಾಜರು ಅಥವಾ ಸಾಂಬವರಾಜರು ಎಂಬ ಹೆಸರು ರೂಢವಾಗಿತ್ತು. ಮಧುರಾ ವಿಜಯದಲ್ಲಿ ಚಂಪರಾಜರೆಂದು ಗಂಗಾದೇವಿ ಅವರನ್ನು ಹೆಸರಿಸಿದ್ದಾಳೆ. ಈ ವಂಶದ ಏಕಾಂಬರನಾಥನು ಮಧುರೆಯ ಸುಲ್ತಾನರಿಂದ ಕೆಲವು ಪ್ರಾಂತಗಳನ್ನು ಕಸಿದುಕೊಂಡಿದ್ದನು. ಅನಂತರ ಬಂದ ರಾಜನಾರಾಯಣನಿಗೆ ವಿಜಯನಗರದ ಹರಿಹರನು

ನೆರವು ನೀಡಿ ಮಧುರೆಯ ಸುಲ್ತಾನರ ಉಪಟಳವನ್ನು ತಡೆಯಲು ಏರ್ಪಡಿಸಿದ್ದನು. ಹರಿಹರನ ಕಾಲದಲ್ಲಿಯೇ ಬುಕ್ಕನು ಮಧುರೆಯ ಸುಲ್ತಾನನನ್ನು ಓಡಿಸಿ ಮಧುರೆಯನ್ನು ವಶಪಡಿಸಿಕೊಂಡು ಬಂದಿದ್ದನು. ಕೆಲವು ವರ್ಷಗಳಲ್ಲಿಯೇ ಮತ್ತೆ ಅಲ್ಲಿ ಸುಲ್ತಾನರ ಆಳ್ವಿಕೆ ಪ್ರಾರಂಭವಾಗಿ ಹಿಂದೂಗಳಿಗಾಗುತ್ತಿದ್ದ ಹಿಂಸೆ ಮಿತಿಮೀರಿ ಹೋಯಿತು. ಇತ್ತ ರಾಜನಾರಾಯಣನು ವಿಜಯನಗರಕ್ಕೆ ಕೃತಘ್ನನಾಗಿ ತಾನು ಸ್ವತಂತ್ರನೆಂದು ಘೋಷಿಸಿಕೊಂಡನು. ಆಗ ಬುಕ್ಕರಾಜನು ಈ ಕಡೆಗೆ ಗಮನಹರಿಸಬೇಕಾಗಿ ಬಂದಿತು. ಮುಖ್ಯವಾಗಿ ಅವನು ಎರಡು ಹೊಣೆಯ ಕಾರ್ಯಗಳನ್ನು ನಿರ್ವಹಿಸಬೇಕಾಗಿ ಬಂದಿತು. ತುಂಡೀರಮಂಡಲದ ರಾಜನಾರಾಯಣನಿಗೆ ಶಾಸ್ತಿ ಮಾಡುವುದೊಂದು ; ಮಧುರೆಯ ಸುಲ್ತಾನನ ಪುಂಡನ್ನಡಗಿಸುವುದು ಇನ್ನೊಂದು. ಈ ಎರಡು ಕಾರ್ಯಗಳನ್ನು ನಿರ್ವಹಿಸಲು ತನ್ನ ಮಗನಾದ ಕಂಪಣನೇ ಸಮರ್ಥನೆಂದು ಭಾವಿಸಿ ಬುಕ್ಕರಾಯನು ಆತನಿಗೆ ಈ ಹೊಣೆಯನ್ನು ಒಪ್ಪಿಸಿದನು.

ಗಂಗಾದೇವಿ ಮಧುರಾವಿಜಯದಲ್ಲಿ ಹೇಳುತ್ತಾಳೆ: ಬುಕ್ಕ ಮಹಾರಾಜನು ರಾಜಪುತ್ರನಾದ ಕಂಪಣನನ್ನು ಕರೆಸಿ ಅವನಿಗೆ ಹಿತೋಪದೇಶ ಮಾಡಿದನು. “ಯುವಕರಾದ ರಾಜಪುತ್ರರು ತಮ್ಮ ನಡತೆಯನ್ನು ಪರಿಶುದ್ಧವಾಗಿಟ್ಟುಕೊಳ್ಳಬೇಕೆಂದೂ ಜೂಜು, ಬೇಟೆ, ಕುಡಿತ ಮುಂತಾದವು ಕೆಟ್ಟ ವ್ಯಸನಗಳೆಂದೂ ಅಂತಹ ಚಟಗಳಿಗೆ ಎಂದಿಗೂ ಅವಕಾಶವನ್ನೀಯಬಾರದೆಂದೂ ಒತ್ತಿ ಹೇಳಿದನು. ರಾಜ್ಯಲಕ್ಷ್ಮಿ ಬಹಳ ಚಂಚಲಸ್ವಭಾವದವಳು. ರಾಜನಾಗತಕ್ಕವನು ಜಿತೇಂದ್ರಿಯನಾಗಿದ್ದು ಯಾವ ಸಂದರ್ಭದಲ್ಲಿಯೂ ಧರ್ಮಕ್ಕೆ ಲೋಪವಾಗದಂತೆ ನೋಡಿಕೊಳ್ಳಬೇಕು. ಪ್ರಜೆಗಳ ಸುಖವೇ ರಾಜನ ಗುರಿಯಾಗಿರಬೇಕು. ರಾಜನಿರುವುದು

ಪ್ರಜೆಗಳ ಪಾಲನೆಗಾಗಿ. ಶತ್ರುಗಳ ವಿಷಯದಲ್ಲಿ ತಂಬ ಎಚ್ಚರಿಕೆ ಯಿಂದಿರಬೇಕು. ಜಾಗರೂಕತೆಯಿಂದ ಯಾವಾತನು ತನ್ನ ಕರ್ತವ್ಯ ಗಳನ್ನು ಪಾಲಿಸುತ್ತ, ಧರ್ಮದಿಂದ ನಡೆದುಕೊಳ್ಳುವನೋ ಆತ ನಿಗೆ ಜಯವಾಗುವುದು ನಿಶ್ಚಯ. ರಾಜ್ಯಲಕ್ಷ್ಮಿಯು ಅವನನ್ನು ತೊರೆಯುವುದಿಲ್ಲ. ಶೌರ್ಯ, ಔದಾರ್ಯ, ಗಾಂಭೀರ್ಯಗುಣ ಗಳು ನಿನ್ನಲ್ಲಿ ನೆಲೆಸಿವೆ. ದೊಡ್ಡತನದಿಂದ ನೀನು ನಡೆದುಕೊ. ಆದರಿಂದ ಸಾಮಂತ ರಾಜರೆಲ್ಲರೂ ನಿನ್ನ ಆಜ್ಞೆಯನ್ನು ವಿನಯ ದಿಂದ ಪಾಲಿಸುತ್ತಾರೆ. ಈಗ ನಿನಗೆ ಒಂದು ದೊಡ್ಡ ಕಾರ್ಯದ ಹೊಣೆಯನ್ನು ಹೊರಿಸುತ್ತಿದ್ದೇನೆ. ತುಂಡೀರಮಂಡಲದ ದೊರೆ ಚಂಪರಾಯನ ಪುಂಡತನವನ್ನಡಗಿಸಿ ಕಾಂಚೀಪುರದಲ್ಲಿ ನೀನು ಬಿಡಾರ ಹೂಡಬೇಕು. ಅದು ಕೆಲವು ಕಾಲ ನಿನ್ನ ರಾಜಧಾನಿ ಯಾಗಿರಲಿ. ಅಲ್ಲಿ ನೀನು ನಿನ್ನ ದಕ್ಷತೆಯಿಂದ ಪ್ರಾಬಲ್ಯ ವನ್ನು ಗಳಿಸು. ಅನಂತರ ದಕ್ಷಿಣದಲ್ಲಿರುವ ಮತ್ತಿತರ ವನ್ಯ ರಾಜರನ್ನು ಗೆಲ್ಲು. ಮಧುರೆಯ ಸುಲ್ತಾನನು ಅತ್ಯಂತ ಕ್ರೌರ್ಯ ದಿಂದ ನಡೆಯುತ್ತ ಪ್ರಜಾಪೀಡಕನಾಗಿದ್ದಾನೆಂದು ನನಗೆ ದೂರು ಬಂದಿದೆ. ಆ ಸುಲ್ತಾನನ ತುಂಟತನವನ್ನಡಗಿಸಿ ಮಧುರೆಯನ್ನು ವಶಪಡಿಸಿಕೊ. ನಿನಗೆ ಬೇಕಾದಷ್ಟು ಗಜಸೇನೆ, ಅಶ್ವಬಲ, ಕಾಲಾಳುಗಳನ್ನೂ ಸಾಮಂತರಾಜರನ್ನೂ ಕರೆದುಕೊಂಡು ದಂಡ ಯಾತ್ರೆಗೆ ಹೊರಡು. ನಿನ್ನ ಕಾರ್ಯದಕ್ಷತೆ, ರಾಜಕೀಯ ಚತು ರತೆ, ಪರಾಕ್ರಮಗಳು ಪ್ರಕಟವಾಗಲಿ" ಎಂದು ಹೇಳಿದನು. ಒಡನೆಯೇ ಕಂಪಣನು ತಲೆಬಾಗಿ ತಂದೆಗೆ ನಮಸ್ಕರಿಸಿ ಕಾರ್ಯ ಸನ್ನದ್ಧನಾದನು. ತನ್ನ ಸೇನಾಪತಿಗಳಿಗೆ ಸರ್ವಸಿದ್ಧತೆಗಳನ್ನೂ ಮಾಡಿಕೊಂಡು ಮೂರನೆಯ ದಿನವೇ ಯುದ್ಧಯಾತ್ರೆಗೆ ಹೊರಡ ಬೇಕೆಂದು ಆಜ್ಞಾಪಿಸಿದನು. ತಂದೆಯ ಆದೇಶದಂತೆ ದಕ್ಷಿಣಕ್ಕೆ



"ಸುಲ್ತಾನನ ತುಂಟತನವನ್ನಡಗಿಸಿ ಮಧುರೆಯನ್ನು ವಶಪಡಿಸಿಕೊ..."

ಸೇನಾಸಹಿತನಾಗಿ ನುಗ್ಗಿ ತನ್ನ ಯುದ್ಧಸಾಮರ್ಥ್ಯವನ್ನು ಪ್ರಕಾಶ ಗೊಳಿಸುವುದು ಅವನ ಉದ್ದೇಶವಾಗಿತ್ತು.

## ದಂಡಯಾತ್ರೆ

ಮಾರನೆಯ ದಿನ ಬೆಳಗಾಯಿತು. ಕಂಪಣನು ತನ್ನ ಪ್ರಾತಃ ಕೃತ್ಯಗಳನ್ನು ಮುಗಿಸಿ ಸೇನಾಪತಿಯನ್ನು ಕರೆದು, ಸೇನೆಯು ಹೊರಡಲೆಂದು ತಿಳಿಸಿದನು. ಕೂಡಲೆ ರಣಭೇರಿಗಳು ಮೊಳಗಿ ದವು. ಸಾವಿರಾರು ಆನೆಗಳು ಸಾಲಾಗಿ ನಿಂತವು. ಸವಾರ ಯೋಧರು ಕವಚಗಳನ್ನು ತೊಟ್ಟು ಆಯುಧಗಳನ್ನು ಧರಿಸಿ ಜೀನು ಹಾಕಿದ ಕುದುರೆಗಳನ್ನೇರಿ ಶಿಸ್ತಿನಿಂದ ಪ್ರಯಾಣಕ್ಕೆ ಸಜ್ಜಾಗಿ ಬಂದು ನಿಂತರು. ಬೇರೆ ಬೇರೆ ದೇಶಗಳಿಗೆ ಸೇರಿದ ಸೈನಿಕರು ಕೃಪಾಣ, ಕರಪಾಣ, ಪ್ರಾಸ, ಕುಂತ ಮತ್ತು ಧನುಸ್ಸು ಮೊದ ಲಾದ ಆಯುಧಗಳನ್ನು ಹಿಡಿದು ಸಾಲುಗಟ್ಟಿದರು. ಬೇರೆ ಬೇರೆ ತುಕಡಿಯ ಸೇನಾನಿಗಳು ಯುದ್ಧದ ಪೋಷಾಕನ್ನು ಧರಿಸಿ, ತಮ್ಮ ತಮ್ಮ ಬಿರುದು ಬಾವಲಿಗಳನ್ನು ಮೆರೆಸುತ್ತ ಕಂಪಣನ ಅರಮನೆ ಯೆದುರಿಗೆ ಬಂದು ರಾಜಪುತ್ರನು ಬರುವುದನ್ನು ಕಾಯುತ್ತ ಮಹಾದ್ವಾರದ ಬಳಿ ಸೇರಿದರು. ಎಲ್ಲೆಲ್ಲಿಯೂ ವಿಜಯನಗರದ ರಾಜಧ್ವಜಗಳನ್ನು ಎತ್ತಿ ಹಿಡಿಯಲಾಗಿತ್ತು. ರಾಜಪುತ್ರ ಕಂಪಣ ನನ್ನು ಸ್ವಾಗತಿಸುವುದಕ್ಕಾಗಿ ಶ್ವೇತಚ್ಛತ್ರವನ್ನು ಹಿಡಿಯಲಾಗಿತ್ತು. ಬ್ರಾಹ್ಮಣರು ಅಥರ್ವಣವೇದದ ಮಂತ್ರಗಳನ್ನು ಪಠಿಸುತ್ತ ಕುಮಾರ ಕಂಪಣನನ್ನು ಆಶೀರ್ವದಿಸಿದರು. ಕುಲಗುರುಗಳು ಗೊತ್ತುಮಾಡಿದ್ದ ಸುಮುಹೂರ್ತದಲ್ಲಿ ರಾಜಪುತ್ರನು ಅರಮನೆ ಯಿಂದ ಹೊರಟನು. ಬುಕ್ಕರಾಜನು ಮಗನನ್ನು ಪ್ರೀತಿಯಿಂದ

ನೋಡುತ್ತ ಅವನನ್ನು ಕಳಿಸಿಕೊಡುವುದಕ್ಕೆ ಜೊತೆಗೆ ಬಂದನು. ಜಯಘೋಷವು ಮೊಳಗಿತು.

ಅರಮನೆಯ ಮಹಾದ್ವಾರದ ಬಳಿ ಒಂದು ಉತ್ತಮ ಜಾತಿಯ ಕುದುರೆಯನ್ನು ಕಂಪಣನಿಗಾಗಿ ತಂದು ನಿಲ್ಲಿಸಲಾಗಿತ್ತು. ತನ್ನ ಖುರಪುಟಗಳಿಂದ ನೆಲವನ್ನು ಕೆರೆಯುತ್ತ, ಕಿವಿಗಳನ್ನು ನಿಮಿರಿಸಿ ಕೆನೆಯುತ್ತ, ಉತ್ಸಾಹದ ಮೂರ್ತಿಯೋ ಎಂಬಂತೆ ಕಂಗೊಳಿಸುತ್ತಿದ್ದ ಆ ಕುದುರೆಯನ್ನು ಕಂಪಣನು ಏರಿದನು. ಸಾಲಾಗಿ ನಿಂತಿದ್ದ ಸಾಮಂತರಾಜರು ತಮ್ಮ ತಲೆಯ ಮೇಲೆ ಕೈಜೋಡಿಸಿ ವಂದಿಸಿ, “ರಾಜಪುತ್ರನಿಗೆ ಜಯವಾಗಲಿ !” ಎಂದು ಏಕಕಂಠದಿಂದ ಘೋಷಿಸಿದರು. ಕಂಪಣನು ಏರಿದ್ದ ಅಶ್ವವು ಠೀವಿಯಿಂದ ಹೊರಟಿತು. ಚೋಳ, ಕೇರಳ, ಪಾಂಡ್ಯದೇಶಗಳ ರಾಜರು ರಾಜಕುಮಾರನಿಗೆ ದಾರಿಮಾಡಿಕೊಡುತ್ತ ರಾಜಬೀದಿ ಯಲ್ಲಿ ಮುಂದೆ ಸಾಗಿದರು. ನಗರದ ಸ್ತ್ರೀಯರು ರಾಜಪುತ್ರನಿಗೆ ಶುಭವಾಗಲೆಂದು ಹರಸುತ್ತ ಅರಳನ್ನು ಬೀರುತ್ತಿದ್ದರು. ಕುದುರೆ ಗಳ ಕೆನೆತ, ಆನೆಗಳ ಘೀಂಕಾರ, ಸೈನಿಕರ ಜಯಕಾರಗಳ ಕೋಲಾ ಹಲ ಧ್ವನಿಯೊಡನೆ ಕಂಪಣನು ಪ್ರಯಾಣ ಮಾಡಿದನು.

ಕಂಪಣನು ತ್ವರೆಯಿಂದ ಪ್ರಯಾಣ ಮಾಡುತ್ತ ಐದಾರು ದಿನಗಳಲ್ಲಿ ಕರ್ಣಾಟಕ ದೇಶವನ್ನು ದಾಟಿ ಕಂಟಕಾನನಪುರವನ್ನು ಸೇರಿದನೆಂದು ಗಂಗಾದೇವಿ ಹೇಳುತ್ತಾಳೆ. ಕಂಟಕಾನನಪುರವೆಂದರೆ ಈಗಿನ ಕೋಲಾರಜಿಲ್ಲೆಯ ಮುಳಬಾಗಿಲು. ಮುಳ್‌ವಾಯಿ ಯೆಂಬ ಶಬ್ದದ ಸಂಸ್ಕೃತೀಕರಣವೇ ಕಂಟಕಾನನ (ಮುಳ್ ಕಂಟಕ, ವಾಯಿ ಅನನ). ಮುಳಬಾಗಿಲಿನಲ್ಲಿ ಸ್ವಲ್ಪ ದಿನ ವಿಶ್ರ ಮಿಸಿಕೊಂಡು ಮುಂದಿನ ಆಕ್ರಮಣಕ್ಕೆ ಹಂಚಿಕೆಯನ್ನು ರೂಪಿಸು ವುದು ಕಂಪಣನ ಉದ್ದೇಶವಾಗಿತ್ತು. ಕಂಪಣನು ಮುಳಬಾಗಿಲು ಪ್ರಾಂತದ ಮಹಾಮಂಡಲೇಶ್ವರನಾಗಿದ್ದನೆಂಬುದಕ್ಕೆ ದಾಖಲೆಗಳು

ಸಿಗುತ್ತವೆ. ಕೆಲವು ದಿನಗಳ ಮೇಲೆ ಆತನು ತನ್ನ ಸೈನ್ಯವನ್ನು ಚಂಪರಾಯನ ರಾಜ್ಯದೊಳಗೆ ನುಗ್ಗಿಸಿ, ಪಾಲಾರ್ ನದೀ ತೀರ ದಲ್ಲಿದ್ದ ವಿರಿಂಚಿಪುರದ ಸಮೀಪಕ್ಕೆ ಬಂದು ಬೀಡುಬಿಟ್ಟನು. ಅಲ್ಲಿ ಚಂಪರಾಯನ ದ್ರಾವಿಡ ಸೇನೆಗೂ ವಿಜಯನಗರದ ಕರ್ಣಾಟಕ ಸೇನೆಗೂ ಭಾರಿ ಯುದ್ಧ ನಡೆಯಿತು. ವಿಜಯನಗರ ದವರ ಹೊಡೆತವನ್ನು ಸಹಿಸಲಾರದೆ ಚಂಪರಾಯನ ಸೇನೆ ಹಿಮ್ಮೆ ಟ್ಟಿತು. ಚಂಪರಾಯನು ಓಡಿಹೋಗಿ ರಾಜಗಂಭೀರ ಕೋಟೆಯಲ್ಲಿ ಅಡಗಿಕೊಂಡನು. ಕಂಪಣನ ಸೇನೆ ಬೆನ್ನಟ್ಟಿಹೋಗಿ ರಾಜಗಂಭೀರ ಕೋಟೆಯನ್ನು ಮುತ್ತಿತು. ಮುತ್ತಿಗೆಯನ್ನು ಎಷ್ಟು ದಿನ ತಡೆದುಕೊಳ್ಳಲಾದೀತು ? ಅಷ್ಟರಲ್ಲಿ ಕಂಪಣನ ಸೈನಿಕರು ಸುಮ್ಮ ನಿರದೆ ಕೋಟೆಗೆ ಲಗ್ಗೆ ಹತ್ತಿ ಏಣಿಗಳ ಮೂಲಕ ಎತ್ತರವಾದ ಕೋಟೆಯ ಗೋಡೆಗಳನ್ನೇರಿ ಹೋಗಿ ಚಂಪರಾಯನ ಸೈನಿಕರ ಮೇಲೆ ಆಕ್ರಮಣ ಮಾಡಿದರು. ಇವರ ಆಕ್ರಮಣವನ್ನು ಚಂಪರಾಯನ ಸೈನಿಕರು ತಡೆಯಲಾರದೆ ಹಿಮ್ಮೆಟ್ಟಿದರು. ಚಂಪರಾಯನಿಗೆ ಇನ್ನು ಸಹಿಸಲಾಗಲಿಲ್ಲ. ಅವನು ನುರಿತ ವೀರ ಯೋಧನಾಗಿದ್ದನು. ಏಕಾಕಿಯಾಗಿ ಖಡ್ಗವನ್ನು ಹಿರಿದು ಕಂಪಣನ ಸೇನೆಯ ಕಡೆಗೆ ನುಗ್ಗಿ ಬಂದನು. ಕ್ಷತ್ರಿಯ ಧರ್ಮದಂತೆ ಯಾರಾದರೊಬ್ಬರು ಆತನನ್ನೆದುರಿಸಿ ಹೋರಾಡಬೇಕಾಗಿತ್ತು. ಕಂಪಣನ ಸೇನಾಪತಿಗಳು ನಾನು ನಾನೆಂದು ಹೋರಾಡಲು ಮುಂದಾದರು. ವೀರ ಕಂಪಣನು ಅವರಿಗೆ ಅನುಮತಿಯನ್ನು ನೀಡಲಿಲ್ಲ. ಆ ಹೋರಾಟದ ಗೌರವ ತನಗೇ ಸಲ್ಲಬೇಕಾದ್ದೆಂದು ನಿಶ್ಚಯಿಸಿ ತಾನೂ ಖಡ್ಗಧಾರಿಯಾಗಿ ನಿಂತು ಚಂಪರಾಯನನ್ನು ಆಹ್ವಾನಿಸಿದನು. ಅವರಿಬ್ಬರಿಗೂ ಭೀಕರವಾದ ಖಡ್ಗಯುದ್ಧ ನಡೆಯಿತು. ಚಂಪರಾಯನು ಹೆಡೆಯೆತ್ತಿದ ಕಾಳಿಂಗ ಸರ್ಪದಂತೆ



ಭೀಕರವಾದ ಖಡ್ಗಯುದ್ಧ ನಡೆಯಿತು

ಕಂಪಣನ ಮೇಲೆ ಎರಗಿದನು. ಕಡೆಯಲ್ಲಿ ವೀರ ಕಂಪಣನು ಖಡ್ಗದಿಂದ ಕತ್ತರಿಸಿ ಚಂಪರಾಯನನ್ನು ಸಂಹರಿಸಿದನು.

## ಚಂಪರಾಯ

ಮಧುರಾವಿಜಯದಲ್ಲಿ ಚಂಪರಾಜ ಎಂದು ಹೇಳಲಾಗಿದೆ. ಶಾಸನಗಳಲ್ಲಿ ಶಂಭುವರಾಯ ಎಂದಿದೆ. ಇದು ಮನೆತನದ ಹೆಸರು.

ಮೂಲಪುರುಷನು ಈ ಹೆಸರಿನವನಾಗಿರಬೇಕು. ವೀರ ಕಂಪಣ ನೊಡನೆ ಯುದ್ಧ ಮಾಡಿದವನು ರಾಜನಾರಾಯಣ ಶಂಭುವ ರಾಯ. ವೆಣ್ರುಮಂಕೊಂಡನ್ ಎಂಬುವನು ಇವನ ತಂದೆ. ರಾಜ ನಾರಾಯಣನು ರಾಜಗಂಭೀರ ರಾಜ್ಯವನ್ನು ಕ್ರಿ. ಶ. 1339ರಿಂದ 1362ರವರೆಗೆ ಆಳಿದನೆಂದು ತಿಳಿದುಬರುತ್ತದೆ. ಕಡೆಯದಾಗಿ ಅವನು ವೀರ ಕಂಪಣನೊಡನೆ ಹೋರಾಡಿದ್ದು 1362ರಲ್ಲಿ. ಹೋರಾಟದಲ್ಲಿ ರಾಜನಾರಾಯಣನು ಮಡಿದನೆಂದು ಗಂಗಾದೇವಿ ಸ್ಪಷ್ಟವಾಗಿ ಹೇಳಿದ್ದಾಳೆ. ರಾಮಾಭ್ಯುದಯ ಮತ್ತು ಸಾಳುವಾಭ್ಯು ದಯ ಎಂಬ ಕಾವ್ಯಗಳಲ್ಲಿ ಶಂಭುವರಾಯನು ಯುದ್ಧದಲ್ಲಿ ಸೋತನೆಂದು ಮಾತ್ರ ಹೇಳಿದೆ. ಮುಂದೆ ಮಧುರೆಯ ಸುಲ್ತಾನ ನನ್ನು ಗೆಲ್ಲುವುದಕ್ಕೆ ಶಂಭುವರಾಯನು ಕಂಪಣನಿಗೆ ಸಹಾಯ ಮಾಡಿದನೆಂಬ ಹೇಳಿಕೆಯೂ ಇದೆ. ಇವುಗಳಿಗೆ ಹೊಂದಾಣಿಕೆ ಮಾಡುವುದು ಹೇಗೆ ?

ಈ ವಿಷಯದಲ್ಲಿ ಇತಿಹಾಸಕಾರರು ಬೇರೆ ಬೇರೆ ಅಭಿ ಪ್ರಾಯಗಳನ್ನು ಹೊಂದಿದ್ದಾರೆ. ಕಂಪಣನ ಜೊತೆಯಲ್ಲಿಯೇ ಇದ್ದ ಅವನ ರಾಣಿ ಗಂಗಾದೇವಿಯ ಮಾತನ್ನು ನಾವು ಅಂಗೀ ಕರಿಸುವುದಾದರೆ, ರಾಜನಾರಾಯಣನು ಯುದ್ಧದಲ್ಲಿ ಮೃತ ನಾದದ್ದು ದಿಟ. ಅವನ ಮಗ ಇನ್ನೊಬ್ಬ ಶಂಭುವರಾಯನು ಶರಣಾಗದೆ ಹೋರಾಟದಲ್ಲಿ ತೊಡಗಿದ. "ಕಂಪಣನ ಸೇನಾಪತಿ ಮಾರಯ್ಯನಾಯಕನು ವೆಣ್ರುಮಂಕೊಂಡ ಶಂಭುವರಾಯನನ್ನು ಸೆರೆ ಹಿಡಿದನು" ಎಂದು ಒಂದು ಶಾಸನದಲ್ಲಿದೆ. ಈತನೇ ರಾಜ ನಾರಾಯಣನ ಮಗನಾಗಿರಬೇಕು. ಈತನ ಬೇಡಿಕೆಯಂತೆ ಕಂಪಣನು ತೈಯೂರಿನ ದೇವಸ್ಥಾನದಲ್ಲಿ ಶಿವಪೂಜೆಗಾಗಿ ಕೆಲವು ಹಳ್ಳಿಗಳನ್ನು ಸರ್ವಮಾನ್ಯವೆಂದು ದತ್ತಿಯಾಗಿ ಕೊಟ್ಟನು. ರಾಜನಾರಾಯಣನನ್ನು ಕೊಂದದ್ದು ಕ್ರಿ.ಶ. 1362ರಲ್ಲಿ.

## ರಾಜಗಂಭೀರ ರಾಜ್ಯ

ರಾಜನಾರಾಯಣನು ಆಶ್ರಯಿಸಿದ ರಾಜಗಂಭೀರ ಕೋಟೆ ಎಂದರೆ ಪಡುವೀಡುದುರ್ಗವೇ. ಚಿಂಗಲಪೇಟೆ, ಉತ್ತರ ಆರ್ಕಾಟ್, ದಕ್ಷಿಣ ಆರ್ಕಾಟ್—ಈ ಪ್ರಾಂತಗಳು ಸೇರಿ ಈ ರಾಜ್ಯವಾಗಿತ್ತೆಂದು ಹೇಳಬಹುದಾಗಿದೆ. ಈ ಪ್ರಾಂತಕ್ಕೆ ತುಂಡೀರ ಮಂಡಲ, ತುಂಡೀರವನ—ಎಂದೂ ವ್ಯವಹಾರವಿತ್ತು. ಚಂಪ ರಾಯನನ್ನು ವನ್ಯರಾಜ ಎಂದು ಗಂಗಾದೇವಿ ಕರೆದಿದ್ದಾಳೆ. ಅವಳ ಮಾತಿಗೆ ಎರಡು ಅರ್ಥಗಳಿರುವುದು ಸಾಧ್ಯ. ತುಂಡೀರವನದ ರಾಜನಾದ್ದರಿಂದ ವನ್ಯರಾಜ ಎಂಬುದೊಂದು. ವನ್ಯ ಎಂದರೆ ಕಾಡು ಮನುಷ್ಯ. ಅವನು ಅನಾಗರಿಕನೆಂಬ ಸೂಚ್ಯಾರ್ಥ ಇನ್ನೊಂದು.

ಕಂಪಣನು ರಾಜಗಂಭೀರ ರಾಜ್ಯವನ್ನು ವಶಪಡಿಸಿಕೊಂಡ ಮೇಲೆ ತಂಜಾವೂರು ಮತ್ತು ಕೊಯಮತ್ತೂರುಗಳನ್ನು ತನ್ನ ವಶಕ್ಕೆ ತಂದುಕೊಂಡನು. ಅವನು ಕಾಂಚಿಯಲ್ಲಿದ್ದು ಅದನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದನೆಂಬುದಕ್ಕೆ ದಾಖಲೆಗಳು ಸಿಗುತ್ತವೆ. 'ಕಾಂಚೀನ್ಯಸ್ತಜಯ ಪ್ರಶಸ್ತಿಃ'–ಕಾಂಚಿಯಲ್ಲಿ ಕಂಪಣನು ಜಯಸ್ತಂಭವನ್ನು ಸ್ಥಾಪಿಸಿದನೆಂದು ಗಂಗಾದೇವಿ ಹೇಳುತ್ತಾಳೆ. ಕಾಂಚಿಯೇ ಮರಕತನಗರವೆಂಬ ಊಹೆಯುಂಟು.

ಕಂಪಣನು ಮರಕತಪುರದಲ್ಲಿ ರಾಜ್ಯಭಾರ ಮಾಡುತ್ತಾ, ತಾನು ವಶಪಡಿಸಿಕೊಂಡ ಪ್ರದೇಶಗಳಲ್ಲಿ ವ್ಯವಸ್ಥಿತವಾದ ಆಡಳಿತ ವನ್ನು ಜಾರಿಗೆ ತಂದನು. ಆದುವರೆಗೆ ಆ ಪ್ರದೇಶಗಳು ತುಂಡು ತುಂಡಾಗಿ ಬೇರೆ ಬೇರೆ ರಾಜರುಗಳ ವಶದಲ್ಲಿದ್ದವು. ಪದೇ ಪದೇ ಅವರುಗಳಲ್ಲಿ ಹೊಡೆದಾಟ ನಡೆಯುತ್ತಿದ್ದುದರಿಂದ ಎಲ್ಲೆಡೆಯೂ ಹಾಹಾಕಾರವುಂಟಾಗಿ ಜನರು ಬಹಳ ಕಷ್ಟವನ್ನನುಭವಿಸುತ್ತಿದ್ದರು.

ಇದನ್ನು ಮನಗಂಡು ಕಂಪಣನು ಪ್ರಜಾಕಲ್ಯಾಣಕ್ಕಾಗಿ ತುಂಬ ಶ್ರಮಿಸಿದನು. ಅವರು ಕೊಡಬೇಕಾಗಿದ್ದ ಕಂದಾಯದ ಹೊರೆಯನ್ನು ಮೊದಲು ತಗ್ಗಿಸಿದನು. ಕೆರೆ ಕಾಲುವೆಗಳನ್ನು ತೋಡಿಸಿ ವ್ಯವಸಾಯುವನ್ನು ಉತ್ತಮಪಡಿಸಿದನು. ಕೊಲೆ ಸುಲಿಗೆಗಳನ್ನು ನಿರ್ಮೂಲ ಮಾಡಿದನು. ಎಲ್ಲದಕ್ಕಿಂತಲೂ ಹೆಚ್ಚಾಗಿ ರಾಜಕೀಯ ಭದ್ರತೆ ನೆಲೆಸಿತು. ಯುದ್ಧದ ಭಯ ತಪ್ಪಿತು. ತಮಿಳುನಾಡಿನಲ್ಲಿ ಪಾಂಡ್ಯ, ಚೋಳರಾಜರು ಕಟ್ಟಿಸಿದ ಹಲವು ಸುಪ್ರಸಿದ್ಧ ದೇವಾಲಯಗಳಿದ್ದವು. ಈಗಲೂ ಅಲ್ಲಿ ದೇವಸ್ಥಾನಗಳ ಸಂಖ್ಯೆ ಅಧಿಕವಾಗಿಯೇ ಇದೆ. ಮುಸ್ಲಿಮರ ಹಾವಳಿಯಿಂದ ಅನೇಕ ದೇವಾಲಯಗಳು ಭಗ್ನವಾಗಿದ್ದವು. ಪೂಜಾವ್ಯವಸ್ಥೆ ತಪ್ಪಿಹೋಗಿತ್ತು. ಕಂಪಣನು ಅನೇಕ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿ, ದತ್ತಿಗಳನ್ನಿತ್ತು ಕ್ರಮವಾಗಿ ಪೂಜೆ ನಡೆಯುವಂತೆ ಏರ್ಪಡಿಸಿದನು. ಅದುವರೆಗೆ ನಾನಾಬಗೆಯ ಕಿರುಕುಳಗಳಿಗೆ ಒಳಗಾಗಿದ್ದ ಪ್ರಜೆಗಳು ಕಂಪಣನ ಕಾಲದಲ್ಲಿ ನೆಮ್ಮದಿಯಿಂದ ಉಸಿರಾಡುವಂತಾಯಿತು. ಕಂಪಣನ ಪ್ರಭಾವ ಸಾಮರ್ಥ್ಯಗಳು ಎಷ್ಟಿದ್ದವೆಂದರೆ ಮಗಧ, ಮಾಳವ, ಸೇವುಣ(?), ಸಿಂಹಳ, ದ್ರಮಿಡ, ಕೇರಳ, ಗೌಳ ದೇಶಗಳ ರಾಜರು ಆತನ ಅರಮನೆಯ ಬಾಗಿಲಿನಲ್ಲಿ ಅವನ ದರ್ಶನಕ್ಕಾಗಿ ಕಾದು ನಿಂತಿರುತ್ತಿದ್ದರು.

ಕಂಪಣನು ಯುದ್ಧವೀರನೂ ಆಡಳಿತದಲ್ಲಿ ಚತುರನೂ ಆಗಿದ್ದನಲ್ಲದೆ ಸ್ವತಃ ವಿದ್ವಾಂಸನಾಗಿದ್ದನು. ಅವನ ಆಸ್ಥಾನದಲ್ಲಿ ಅನೇಕ ವಿದ್ವಾಂಸರೂ ಕವಿಗಳೂ ಇದ್ದರು. ಪಂಡಿತರೊಡನೆ ಶಾಸ್ತ್ರೀಯ ವಿಚಾರಗಳನ್ನು ಚರ್ಚಿಸುತ್ತಿದ್ದನಲ್ಲದೆ ಕವಿಗಳಿಗೆ ವಿಶೇಷವಾದ ಪ್ರೋತ್ಸಾಹವನ್ನೀಯುತ್ತಿದ್ದನು. ಅವನು ಕಲೋಪಾಸಕ. ಕಾವ್ಯಗಳಲ್ಲಿ ಹೆಚ್ಚಿನ ಅಭಿರುಚಿ ಅವನಿಗಿತ್ತು.

## ಸುಲ್ತಾನನ ದುಷ್ಕೃತ್ಯ

ಇಷ್ಟರಲ್ಲೇ ಕಂಪಣನು ಸಂತೃಪ್ತನಾಗಿ ಮೈಮರೆತು ಕುಳಿತುಕೊಳ್ಳಲಿಲ್ಲ. ತಂದೆಯಾದ ಬುಕ್ಕರಾಯನ ಆಜ್ಞೆಯಂತೆ ಅವನು ಮಧುರೆಯ ಸುಲ್ತಾನನ ಮೇಲೆ ದಂಡಯಾತ್ರೆ ಮಾಡಬೇಕಾಗಿತ್ತು. ಅದಕ್ಕೆ ಬೇಕಾದ ಸೇನಾಸಿದ್ಧತೆಗಳಲ್ಲಿ ಅವನು ತೊಡಗಿದ್ದನು. ಗೂಢಚಾರರನ್ನು ಕಳಿಸಿ ಸುಲ್ತಾನನ ಬಲಾಬಲಗಳನ್ನೂ ಅವನ ಆಳ್ವಿಕೆಯ ಲೋಪದೋಷಗಳನ್ನೂ ತಿಳಿದುಕೊಳ್ಳುತ್ತಿದ್ದನು. ಸುಲ್ತಾನ ಎಂಬ ಶಬ್ದವನ್ನು ಗಂಗಾದೇವಿ 'ಸುರತ್ರಾಣ' ಎಂದು ಸಂಸ್ಕೃತೀಕರಿಸಿದ್ದಾಳೆ. ಆ ಸುಲ್ತಾನನು ರಾಜನೇ ಅಲ್ಲ, ಅವನೊಬ್ಬ ಪುಂಡರ ನಾಯಕ ಎಂದು ಕಂಪಣನಿಗೆ ಮನವರಿಕೆಯಾಯಿತು. ಸುಲ್ತಾನನ ದೌರ್ಜನ್ಯದ ದಾರುಣವಾರ್ತೆಗಳು ಕಂಪಣನ ಕಿವಿಗೆ ಮುಟ್ಟಿದವು. ಈ ಸಂದರ್ಭದಲ್ಲಿ ಗಂಗಾದೇವಿ ಒಬ್ಬ ದೇವತಾಸ್ತ್ರೀಯನ್ನು ಕಲ್ಪಿಸಿ, ಅವಳು ಬಂದು ಕಂಪಣನಿಗೆ ಈ ರೀತಿ ಹೇಳಿದಳೆಂದು ತಿಳಿಸುತ್ತಾಳೆ. "ಓ ರಾಜ, ಯವನರ ಕೆಟ್ಟ ನಡತೆಯಿಂದ ಈಗ ವ್ಯಾಘ್ರಪುರಿಯು (ಚಿದಂಬರ) ನಿಜವಾಗಿ ವ್ಯಾಘ್ರಪುರಿಯೆ ಆಗಿದೆ (ಚಿದಂಬರ ಕ್ಷೇತ್ರವು ನಾಶವಾಗಿ ಅಲ್ಲಿ ಹುಲಿಗಳು ಬಂದು ನೆಲೆಸಿವೆ). ಶ್ರೀರಂಗದಲ್ಲಿ ರಂಗನಾಥಸ್ವಾಮಿ ಯೋಗನಿದ್ರೆಯಲ್ಲಿ ಮಲಗಿದ್ದಾನಷ್ಟೆ. ಅವನ ಮೈಮೇಲೆ ಮುರುಕು ಮಾಳಿಗೆಗಳು ಬಿದ್ದಾವೆಂದು ಆದಿಶೇಷನೇ ಅದನ್ನು ಹೊತ್ತು ನಿಂತಿದ್ದಾನೆ! (ಶ್ರೀ ರಂಗದ ರಂಗನಾಥ ದೇವಾಲಯ ಹಾಳು ಬಿದ್ದಿದೆ. ಮೇಲ್ಮಾಳಿಗೆಯನ್ನು ಯವನರು ಒಡೆದಿದ್ದಾರೆ. ಬಿರುಕುಗಳಲ್ಲಿ ಹಾವುಗಳು ಸೇರಿಕೊಂಡಿವೆ). ಗಜಾಸುರನನ್ನು ಸಂಹಾರ ಮಾಡಿದ ಜಂಬುಕೇಶ್ವರನ ದೇವಾಲಯವು ಇಂದು ಕಾಡಾನೆಗಳ ಹಾವಳಿಗೆ ತುತ್ತಾಗಿದೆ, ಈಶ್ವರಲಿಂಗಕ್ಕೆ ಯಾವ

ವಸ್ತ್ರಾಭರಣಗಳೂ ಇಲ್ಲ. ಜೇಡರ ಬಲೆ ಮುಚ್ಚಿಕೊಂಡಿದೆ ಅಲ್ಲದೆ ಇತರ ದೇವಾಲಯಗಳ ಬಾಗಿಲುಗಳನ್ನು ಹುಳುಗಳು ಕೊರೆದಿವೆ. ಕಲ್ಲುಮಂಟಪಗಳ ಸಂದುಗಳಲ್ಲಿ ಹುಲ್ಲು ಬೆಳೆದಿದೆ. ಗರ್ಭಗೃಹಗಳು ಬಿರುಕುಬಿಟ್ಟಿವೆ. ಇದೆಲ್ಲವನ್ನೂ ನೋಡಿ ನನಗೆ ಅತ್ಯಂತ ದುಃಖ ವಾಗಿದೆ. ಯಾವ ದೇವಸ್ಥಾನಗಳಲ್ಲಿ ಹಿಂದೆ ಮಂಗಳವಾದ್ಯಗಳು ಭೋರ್ಗರೆಯುತ್ತಿದ್ದವೋ ಅಲ್ಲಿ ಈಗ ನರಿಗಳು ಭಯಂಕರವಾಗಿ ಊಳಿಡುತ್ತಿವೆ. ಈ ಪುಣ್ಯಭೂಮಿಯಲ್ಲಿ ಹರಿಯುವ ಕಾವೇರಿ ನದಿಯ ನೀರು ಪುಣ್ಯಕಾರ್ಯಗಳಿಗೆ ಉಪಯುಕ್ತವಾಗುತ್ತಿತ್ತು. ಧರ್ಮಬಾಹಿರರಾದ ಮ್ಲೇಚ್ಛರು ಆ ನೀರನ್ನು ಈಗ ತಮ್ಮ ಹೊಲಸು ಕೆಲಸಗಳಿಗಾಗಿ ಬಳಸುತ್ತಿದ್ದಾರೆ. ಕಾವೇರಿಯೂ ತನ್ನ ಪವಿತ್ರ ಕಾರ್ಯವನ್ನು ಬಿಟ್ಟು ಅಧರ್ಮಿಗಳಿಗೆ ಆಶ್ರಯವನ್ನು ಕೊಡುತ್ತಿದ್ದಾಳಲ್ಲ ! ಅಗ್ರಹಾರಗಳಲ್ಲಿ ಹಿಂದೆ ಯಾವಾಗಲೂ ಯಜ್ಞಯಾಗಗಳನ್ನು ನಡೆಸುತ್ತಿದ್ದರು. ಹೊಗೆಯ ಸುಗಂಧವು ಎಲ್ಲೆಡೆಯೂ ಹರಡಿತ್ತು. ವೇದಘೋಷಗಳು ನಡೆಯುತ್ತಿದ್ದವು. ಆ ಸ್ಥಳದಲ್ಲೀಗ ಬೇಯಿಸುವ ಮಾಂಸದ ಕೆಟ್ಟ ವಾಸನೆ ಹರಡಿದೆ. ಕುಡಿದು ಮದಿಸಿದ ಕೇಕೆಗಳೇ ಕೇಳಿಸುತ್ತಿವೆ. ಹೇ ಕಂಪಣರಾಜ, ಮಧುರೆಯ ಪರಿಸ್ಥಿತಿ ಏನಾಗಿದೆ, ನೋಡು. ಉದ್ಯಾನಗಳಲ್ಲಿ ಎಲ್ಲೆಲ್ಲಿಯೂ ಫಲಭರಿತವಾದ ತೆಂಗಿನಮರಗಳು ಕಂಗೊಳಿಸು ತ್ತಿದ್ದವು. ಈಗ ಮರಗಳನ್ನು ಕಡಿದುರುಳಿಸಲಾಗಿದೆ. ಅವುಗಳ ಜಾಗದಲ್ಲಿ ಕಡಿದ ಮಾನವರ ತಲೆಬುರುಡೆಗಳನ್ನು ಎತ್ತರವಾದ ಶೂಲಗಳಿಗೆ ಸಿಕ್ಕಿಸಿ ನೆಲದಲ್ಲಿ ನೆಟ್ಟಿದ್ದಾರೆ. ಮಧುರೆಯ ರಾಜ ಬೀದಿಗಳಲ್ಲಿ ಸ್ತ್ರೀಯರು ನಡೆಯುವಾಗ ಅವರ ಕಾಲಂದುಗೆಗಳ 'ಜಣ ಜಣ' ಎಂಬ ಇಂಪಾದ ನಾದ ಕೇಳಿಬರುತ್ತಿತ್ತು. ಈಗ ಲಾದರೋ ಬ್ರಾಹ್ಮಣರ ಕೈಕಾಲುಗಳಿಗೆ ಕಬ್ಬಿಣದ ಬೇಡಿಗಳನ್ನು ಹಾಕಿ ಅವರನ್ನು ಎಳೆದೊಯ್ಯುವಾಗ ಬೇಡಿಗಳ 'ಖಣ ಖಣ'

ಎಂಬ ಕರ್ಣಕಠೋರವಾದ ಶಬ್ದ ಕೇಳಿಸುತ್ತಿದೆ. ಪಟ್ಟಣದ ಗೋಪುರಗಳಲ್ಲಿರುವ ವಿಗ್ರಹಗಳಿಗೆ ಜೇಡರ ಬಲೆಗಳು ಕವಿದಿವೆ. ಅರಮನೆಯ ಬಾಗಿಲಿನೆದುರಿಗೆ ಹಿಂದೆ ಪಚ್ಚಕರ್ಪೂರದ ನೀರನ್ನು ಸಿಂಪಡಿಸಲಾಗುತ್ತಿತ್ತು. ಆಗ ಆ ಪ್ರದೇಶವು ಖೈದಿಗಳ ಕಣ್ಣೀರಿಂದ ಯಾವಾಗಲೂ ಒದ್ದೆಯಾಗಿರುತ್ತದೆ. ಗೋವುಗಳ ರಕ್ತದ ಕೋಡಿ ಹರಿದು ತಾಮ್ರಪರ್ಣೀನದಿಯ ನೀರು ಕೆಂಪಾಗಿದೆ. ಆ ರಾಜ್ಯದಲ್ಲಿ ಮ್ಲೇಚ್ಛರ ಹೀನಕೃತ್ಯಗಳು ದಿನದಿನವೂ ಹೆಚ್ಚುತ್ತಿವೆ. ಕೃಷಿ ಹಾಳು ಬಿದ್ದಿದೆ. ನರವಧೆ ವರ್ಧಿಸುತ್ತಿದೆ. ತಮಿಳುನಾಡಿನ ದ್ರಾವಿಡಾಂಗನೆಯರ ಮುಖದಲ್ಲಿ ಕಾಂತಿ ಇಲ್ಲ. ಸದಾ ನಿಟ್ಟುಸಿರುಬಿಡುತ್ತ ತಲೆಗೂದಲನ್ನು ಕೆದರಿಕೊಂಡಿರುತ್ತಾರೆ. ಕಣ್ಣೀರು ಬಳಬಳನೆ ಹರಿಯುತ್ತಲೇ ಇರುವುದು, ಮಹಾರಾಜ, ವೇದಶಬ್ದವೇ ಅಸ್ತಂಗತವಾಯಿತು. ನೀತಿ ಎಂಬುದು ಹಾರಿಹೋಯಿತು. ಧಾರ್ಮಿಕ ವಿಚಾರವು ನಿರ್ಮೂಲವಾಯಿತು. ನಡತೆಯೆಂಬುದು ನಷ್ಟವಾಯಿತು. ಒಳ್ಳೆಯ ಕೆಲಸವೆಂಬುದು ಕಣ್ಣಿಗೂ ಕಾಣಿಸದು. ಸೌಜನ್ಯವು ಶೂನ್ಯವಾಗಿದೆ. ಏನು ಹೇಳಲಿ ? ಶತ್ರುಗಳ ಮೆರೆತದಿಂದ ಕಲಿಯುಗದ ಎಲ್ಲ ಕೇಡುಗಳೂ ಸಂದಣಿಸಿದವು" ಎಂದು ಯವನರ ದುಷ್ಕೃತ್ಯಗಳನ್ನು ಕಂಪಣನಿಗೆ ಹೇಳಿ ಆ ದಿವ್ಯಸ್ತ್ರೀಯು ಒಂದು ಅದ್ಭುತವಾದ ಖಡ್ಗವನ್ನು ಕೊಟ್ಟಳು. "ಎಲೈ ಕಂಪಣ ರಾಜ, ಈ ಖಡ್ಗದಿಂದ ಮಧುರೆಯ ಸುಲ್ತಾನನನ್ನು ಶ್ರೀಕೃಷ್ಣನು ಹಿಂದೆ ಮಧುರೆಯಲ್ಲಿ(ಉತ್ತರ ದೇಶದಲ್ಲಿರುವ ಮಧುರೆಯಲ್ಲಿ) ಕಂಸನನ್ನು ಸಂಹರಿಸಿದಂತೆ ಸಂಹರಿಸು. ನಿನ್ನ ವಂಶವು ಧರ್ಮ ಸ್ಥಾಪನೆಗೆ ಹೆಸರಾದದ್ದು. ನಿನ್ನ ಪೂರ್ವಜರು ಮಾಡಿದಂತೆ ಧರ್ಮಸ್ಥಾಪನೆಯ ಮಹಾಕಾರ್ಯವನ್ನು ಸಾಧಿಸು. ಎಲೈ ವೀರನೆ, ಮಹಾಪಾಪಿಯಾದ ಆ ಸುಲ್ತಾನನನ್ನು ಕೊಂದು ಹಾಕಿ, ಮಧುರೆಯಿಂದ ರಾಮಸೇತುವಿನವರಿಗೆ (ಕನ್ಯಾಕುಮಾರಿಯವರೆಗೆ) ಇರುವ



ಆ ದಿವ್ಯ ಸ್ತ್ರೀಯು ಒಂದು ಅದ್ಭುತವಾದ ಖಡ್ಗವನ್ನು ಕಂಪಣನಿಗೆ ಕೊಟ್ಟಳು

ಆತನ ರಾಜ್ಯದಲ್ಲಿ ನಿನ್ನ ವಿಜಯಸ್ತಂಭಗಳನ್ನು ನೆಡಿಸು" ಎಂದು ಹರಸಿದಳು. ಹಾಗೆ ಹೇಳಿದ ದೇವಿ ಮಧುರಾನಗರ ದೇವತೆ ಇರಬಹುದು.

ಇಬ್ನ್ ಬಟೂಟ ಎಂಬುವನು ಆಫ್ರಿಕಾ ದೇಶದ ಒಬ್ಬ ಮುಸಲ್ಮಾನ. ಈತನು ಹದಿನಾಲ್ಕನೆಯ ಶತಮಾನದಲ್ಲಿ ಇಂಡಿಯಾ ದೇಶಕ್ಕೆ ಬಂದು ಈ ದೇಶವನ್ನು ಪೂರ್ಣವಾಗಿ ಸುತ್ತಿ ತಾನು ಕಂಡದ್ದನ್ನು ಬರೆದಿಟ್ಟಿದ್ದಾನೆ. ಈತನ ಬರವಣಿಗೆ ಆ ಕಾಲದ ಇತಿಹಾಸವನ್ನು ಸ್ಪಷ್ಟವಾಗಿ ಚಿತ್ರಿಸುತ್ತದೆ. ಬಟೂಟನು ಮಧುರೆಯ ಸುಲ್ತಾನ ಜಲಾಲ್ ಉದ್ದೀನನ ಮಗಳನ್ನು ಮದುವೆ ಯಾಗಿದ್ದನು. ಅಷ್ಟು ಹತ್ತಿರದ ಒಡನಾಟವಿದ್ದುದರಿಂದ ಮಧುರಾ ಪ್ರಾಂತದ ವಿಷಯವಾಗಿ ಅವನು ಬರೆದಿರುವುದು ವಿಶ್ವಸನೀಯ ವಾಗಿದೆ. ಬಟೂಟನು ಬರೆಯುತ್ತಾನೆ : "ಜಲಾಲ್ ಉದ್ದೀನನು ಐದು ವರ್ಷ ಮಧುರೆಯನ್ನು ಆಳಿದ. ಅಷ್ಟರಲ್ಲಿ ಅವನ ಅಮೀರ ನಾದ ಉದ್ಬೈಜಿ ಎಂಬುವನು ಸುಲ್ತಾನನನ್ನು ಕೊಂದು ತಾನೇ ಆಡಳಿತವನ್ನು ವಹಿಸಿಕೊಂಡನು. ಈ ಉದ್ಬೈಜಿ ಬಹುಮಂದಿ ಹಿಂದೂಗಳನ್ನು ನಿಷ್ಕಾರಣವಾಗಿ ಕೊಲೆ ಮಾಡಿದ. ಒಂದೇ ವರ್ಷದಲ್ಲಿ ಅವನ ಕೊಲೆಯಾಯಿತು. ಆಮೇಲೆ ಅವನ ಅಳಿಯ ಕುತುಬುದ್ದೀನನು ಸುಲ್ತಾನನಾದ. ನಲವತ್ತು ದಿನಗಳಲ್ಲಿ ಅವನ ಕೊಲೆಯಾಯಿತು. ಅನಂತರ ಅಹಸಾನ್ ಷಾ ಎಂಬುವನು ಪಟ್ಟಕ್ಕೆ ಬಂದ. ಇವನು ಬಹಳ ಕ್ರೂರಿ. ಈತನು ನಡೆಸಿದ ಕ್ರೂರವಾದ ಕೊಳಕು ಕೆಲಸವನ್ನು ಒಬ್ಬ ಸುಲ್ತಾನನು ಮಾಡುತ್ತಾನೆಂಬುದು ಇನ್ನೊಂದು ಕಡೆ ಕಾಣಲಾಗದ ದೃಶ್ಯ." (The Delhi Sultanate Vol. VI Pages 233-234)

ಪ್ರಾಯಶಃ ಈ ಬಗೆಯಲ್ಲಿ ನಡೆಯುತ್ತಿದ್ದ ಅತ್ಯಾಚಾರ ಹಿಂಸೆಗಳೇ ಅವರ ಮೇಲೆ ಯುದ್ಧ ಹೂಡಲು ಮೂರನೆಯ ವೀರ

ಬಲ್ಲಾಳನನ್ನು ಹುರಿದುಂಬಿಸಿರಬೇಕು. ಅವನು ಮಧುರಾ ಪ್ರಾಂತಕ್ಕೆ ನುಗ್ಗಿ ಕಣ್ಣಾನೂರನ್ನು ವಶಪಡಿಸಿಕೊಂಡನು. ಕಡೆಗೆ ಸುಲ್ತಾನನ ಸುಳ್ಳು ಮಾತಿಗೆ ಮೋಸಹೋಗಿ ಸೆರೆ ಸಿಕ್ಕಿದನು. ಸುಲ್ತಾನನು ಬಲ್ಲಾಳನನ್ನು ಕೊಂದು ಚರ್ಮವನ್ನು ಸುಲಿಸಿ ಆದ ರೊಳಗೆ ಹುಲ್ಲನ್ನು ತುರುಕಿ ಮಧುರೆಯ ದಿಡ್ಡಿ ಬಾಗಿಲಿಗೆ ತೂಗು ಹಾಕಿದನು. ಅದನ್ನು ತಾನು ಕಣ್ಣಾರೆ ನೋಡಿದೆನೆಂದು ಬಟೂಟನು ಬರೆದಿದ್ದಾನೆ.

ಕಂಪಣನ ಸೇನಾಪತಿಗಳಲ್ಲೊಬ್ಬನಾದ ಗೊಪ್ಪಣಾರ್ಯನು ಯಾತ್ರಾರ್ಥವಾಗಿ ತಿರುಪತಿಗೆ ಹೋಗಿದ್ದನು. ವೆಂಕಟೇಶ್ವರ ದೇವಾಲಯದಲ್ಲಿರಿಸಿದ್ದ ಒಂದು ಕಂಚಿನ ಪ್ರತಿಮೆಯನ್ನು ಕಂಡು ಅದು ಯಾವುದೆಂದು ವಿಚಾರಿಸಿದನು. ಆ ಪ್ರತಿಮೆ ಶ್ರೀರಂಗ ದಲ್ಲಿದ್ದ ಶ್ರೀರಂಗನಾಥಸ್ವಾಮಿಯ ಮೂರ್ತಿಯೆಂದು ತಿಳಿದು ಬಂದಿತು. ಮುಸಲ್ಮಾನರು ಶ್ರೀರಂಗಕ್ಕೆ ಧಾಳಿಯಿಡುತ್ತಾರೆಂದು ತಿಳಿದಾಗ ಭಕ್ತರು ಆ ವಿಗ್ರಹವನ್ನು ಮೊದಲು ಮೇಲುಕೋಟೆಗೆ ಸಾಗಿಸಿ, ಅನಂತರ ತಿರುಪತಿಗೆ ತಂದಿದ್ದರು. ಗೊಪ್ಪಣನು ಅದನ್ನು ಮತ್ತೆ ಶ್ರೀರಂಗದಲ್ಲಿ ಪ್ರತಿಷ್ಠೆ ಮಾಡುವುದಾಗಿ ಪ್ರತಿಜ್ಞೆ ಮಾಡಿ, ಅರ್ಚಕರ ಒಪ್ಪಿಗೆಯನ್ನು ಪಡೆದು ಆ ಪ್ರತಿಮೆಯನ್ನು ತಂದನು. ಅದನ್ನು ತಾತ್ಕಾಲಿಕವಾಗಿ ಶಿಂಗವರಂ ಬೆಟ್ಟದ ಮೇಲಿ ರುವ ದೇವಾಲಯದಲ್ಲಿ ಇರಿಸಿ ಪೂಜೆಗೆ ಏರ್ಪಾಡು ಮಾಡಿದ್ದನು. ಇತ್ತ ಒಬ್ಬ ಯವನ ಕೊತ್ವಾಲನು ಶ್ರೀರಂಗದ ದೇವಸ್ಥಾನದಲ್ಲಿ ಠಾಣ್ಯ ಹೂಡಿದ್ದ. ಅನಾರೋಗ್ಯದ ನಿಮಿತ್ತವಾಗಿ ತನ್ನ ವಾಸ ಸ್ಥಳವನ್ನು ಅಲ್ಲಿಂದ ಕಣ್ಣಾನೂರಿಗೆ ವರ್ಗಾಯಿಸಿದ. ಆ ಕೊತ್ವಾಲನ ಸಮೀಪದಲ್ಲಿ ಸೇರಿಕೊಂಡು ಶಿಂಗಪ್ಪಿರನ್ ಎಂಬಾತನು ಕಂಪಣನ ಪರವಾಗಿ ಗೂಢಚರ್ಯೆಯನ್ನು ನಡೆಸುತ್ತಿದ್ದ. ಕೊತ್ವಾಲನು ಈಗ ಶ್ರೀರಂಗದಲ್ಲಿಲ್ಲವೆಂದೂ ಅವನೂ ಅವನ ಪಡೆಯವರೂ

ಕುಡಿತ, ವ್ಯಭಿಚಾರಗಳಲ್ಲಿ ಮುಳುಗಿ ಮೈಮರೆತಿದ್ದಾರೆಂದೂ ಶ್ರೀರಂಗಕ್ಕೆ ಮುತ್ತಿಗೆ ಹಾಕಲು ಇದು ಸಮಯವೆಂದೂ ಆತನು ಕಂಪಣನಿಗೆ ಸುದ್ದಿಯನ್ನು ಮುಟ್ಟಿಸಿದ. ಒಡನೆಯೇ ಕಂಪಣನ ನೇತೃತ್ವದಲ್ಲಿ ಗೊಪ್ಪಣನು ಸೇನಾಸಮೇತನಾಗಿ ಹೊರಟು ಕೊತ್ವಾಲನ ಪಡೆಯನ್ನು ಧ್ವಂಸ ಮಾಡಿ ಶ್ರೀರಂಗವನ್ನೂ ಕಣ್ಣಾನೂರನ್ನೂ ವಶಪಡಿಸಿಕೊಂಡನು. ತನ್ನ ಪ್ರತಿಜ್ಞೆಯಂತೆ ತಿರುಪತಿಯಿಂದ ತಂದಿದ್ದ ಶ್ರೀರಂಗನಾಥ ಪ್ರತಿಮೆಯನ್ನು ಶ್ರೀರಂಗದಲ್ಲಿ ಮೊದಲಿದ್ದ ಸ್ಥಳದಲ್ಲಿ ಸ್ಥಾಪಿಸಿದನು. ಇದು ನಡೆದದ್ದು ಕ್ರಿ.ಶ. 1370ರಲ್ಲಿ. ಈ ಸಮಯದಲ್ಲಿ ಶ್ರೀವೈಷ್ಣವಾಚಾರ್ಯರಾದ ವೆಂಕಟನಾಥರು ತುರುಕರ ಹಾವಳಿಯನ್ನು ತಡೆಯಲಾರದೆ ಶ್ರೀರಂಗವನ್ನು ಬಿಟ್ಟುಹೋಗಿ ಸತ್ಯಮಂಗಲದಲ್ಲಿ ನೆಲೆಸಿದ್ದರು. ಕಂಪಣನು ಶ್ರೀರಂಗವನ್ನು ವಶಪಡಿಸಿಕೊಂಡ ವಾರ್ತೆಯನ್ನು ಕೇಳಿ ಅವರು ಮತ್ತೆ ಶ್ರೀರಂಗಕ್ಕೆ ಬಂದರು. ಸೇನಾಪತಿಯಾದ ಗೊಪ್ಪಣನು ರಂಗನಾಥ ವಿಗ್ರಹವನ್ನು ತಂದು ಮತ್ತೆ ಆ ಸ್ಥಳದಲ್ಲಿ ಸ್ಥಾಪಿಸಿದ್ದರಿಂದ ಅವರಿಗೆ ಪರಮಾನಂದವಾಯಿತು. ಗೊಪ್ಪಣನನ್ನು ಪ್ರಶಂಸೆ ಮಾಡಿದರು. ಆ ಎರಡು ಶ್ಲೋಕಗಳು ರಂಗನಾಥ ದೇವಾಲಯದ ಮೊದಲನೆಯ ಪ್ರಾಕಾರದ ಪೂರ್ವದಿಕ್ಕಿನ ಗೋಡೆಯ ಮೇಲೆ ಕೆತ್ತಲ್ಪಟ್ಟಿರುವುದನ್ನು ಈಗಲೂ ನೋಡಬಹುದು.

## ಮಧುರಾವಿಜಯ

ಕಂಪಣನು ಅಲ್ಲಿಗೇ ನಿಲ್ಲಲಿಲ್ಲ. ಶ್ರೀರಂಗವು ವಶವಾದೊಡನೆ ಅದೇ ರಭಸದಲ್ಲಿ ಮಧುರೆಯ ಕಡೆಗೆ ವಿಜಯನಗರದ ಸೇನೆಯನ್ನು ನುಗ್ಗಿಸಿದನು.

ಕಂಪಣನ ದಂಡಯಾತ್ರೆ ಯಾವ ವರ್ಷದಲ್ಲಿ ನಡೆಯಿತೆಂಬುದೇ ಇತಿಹಾಸಕಾರರಲ್ಲಿ ವಿವಾದಗ್ರಸ್ತವಾಗಿದೆ. 1370ರಲ್ಲಿ ದಂಡಯಾತ್ರೆ ನಡೆಯಿತೆಂಬುದಕ್ಕೆ ಹೆಚ್ಚಿನ ಒಲವು ಇದೆ. ಆಗ ಮಧುರೆಯನ್ನಾಳುತ್ತಿದ್ದವನು ಖುರ್ಬತ್ ಹಸನ್ ಗಂಗೂ ಎಂದು ಕೆಲವರು ಹೇಳುತ್ತಾರೆ. ಫಕ್ರುದ್ದೀನ್ ಮುಬಾರಕ್ ಷಾ ಎಂದು ಇತರರು ಅಭಿಪ್ರಾಯ ಪಡುತ್ತಾರೆ.

ಕಂಪಣನಿಗೂ ಸುಲ್ತಾನನಿಗೂ ನಡೆದ ಯುದ್ಧಪ್ರಸಂಗವನ್ನು ಮಧುರಾವಿಜಯದಲ್ಲಿ ವಿಸ್ತಾರವಾಗಿ ವರ್ಣಿಸಲಾಗಿದೆ. ಕಾವ್ಯಶೈಲಿಯಲ್ಲಿ ವರ್ಣನೆಯಿದ್ದರೂ ಆ ಯುದ್ಧ ಅತಿ ಭೀಕರವಾಗಿತ್ತೆಂಬುದರಲ್ಲಿ ಸಂದೇಹವಿಲ್ಲ. ಗಜಸೈನ್ಯ, ಅಶ್ವಸೈನ್ಯಗಳು ಯುದ್ಧದಲ್ಲಿ ಭಾಗವಹಿಸಿದ್ದವು. ಕತ್ತಿಗಳಿಂದಲೂ ಬಿಲ್ಲುಬಾಣಗಳಿಂದಲೂ ಹೋರಾಟ ನಡೆಯಿತು. ವಿಜಯನಗರ ಸೈನ್ಯದ ರಭಸಕ್ಕೆ ಮುಸಲ್ಮಾನರು ತತ್ತರಿಸಿದರು. ತನ್ನ ಪಡೆ ಹಿಮ್ಮೆಟ್ಟುತ್ತಿರುವುದನ್ನು ಕಂಡು ಸುಲ್ತಾನನು ತಾನೇ ಕಂಪಣನಿಗೆ ಎದುರಾದನು. ಅವನು ಕತ್ತಿಯನ್ನು ಹಿಡಿದು ಕಂಪಣನ ಮೇಲೆ ಏರಿ ಹೋದನು. ಕಂಪಣನು ತನಗೆ ದಿವ್ಯಸ್ತ್ರೀಯು ಕೊಟ್ಟಿದ್ದ ಖಡ್ಗವನ್ನು ಹಿರಿದನು. ಇಬ್ಬರಿಗೂ ಖಾಡಾಖಾಡಿಯಾದ ಹೋರಾಟ ನಡೆಯಿತು. ಈ ಹೋರಾಟದಲ್ಲಿ ಕಂಪಣನಿಗೇ ಗೆಲುವಾಯಿತು. ಕಂಪಣನ ಶಿರಸ್ಸಿನ ಮೇಲೆ ಪುಷ್ಪವೃಷ್ಟಿಯಾಯಿತು. ದಕ್ಷಿಣದೇಶಕ್ಕೆ ಮುಸಲ್ಮಾನರ ಕಾಟ ತಪ್ಪಿತು.

ಇಲ್ಲಿಗೆ ಮಧುರಾವಿಜಯದ ವೃತ್ತಾಂತ ಮುಗಿಯುತ್ತದೆ. ಮುಕ್ತಾಯದಲ್ಲಿ ಒಂದೆರಡು ಶ್ಲೋಕಗಳು ನಷ್ಟವಾಗಿರಬಹುದು. ಕಂಪಣನು ಚಂಪರಾಯನನ್ನು ಜಯಿಸಿ ಕಾಂಚಿಯಲ್ಲಿ ನೆಲೆಸಿದ್ದು 1362ರಲ್ಲಿ. ಮಧುರೆಯ ಆಕ್ರಮಣ 1370ರಲ್ಲಿ. ಈ ನಡುವೆ

ಎಂಟು ವರ್ಷಗಳು ಕಳೆದಿವೆ. ಇಷ್ಟು ಕಾಲದವರೆಗೆ ಕಂಪಣನು ಕಾಯುತ್ತ ಇದ್ದುದೇಕೆಂದು ಹೇಳುವುದು ಕಷ್ಟ.

## ಕಂಪಣನ ಪ್ರಶಂಸೆ

ಗಂಗಾದೇವಿಯು ಕಥಾನಾಯಕನಾದ ತನ್ನ ಗಂಡ ಕಂಪಣ ರಾಯನನ್ನು ಬಾಯಿ ತುಂಬ ಹೊಗಳಿದ್ದಾಳೆ. ನೋಡುವುದಕ್ಕೆ ಅವನು ಬಹು ಸುಂದರ. ಆಗಿನ ಪದ್ಧತಿಯಂತೆ ತನ್ನ ನಿಡಿದಾದ ತಲೆಕೂದಲನ್ನು ಗಂಟುಹಾಕಿ ಹೂವನ್ನು ಮುಡಿದುಕೊಳ್ಳುತ್ತಿದ್ದ. ಅವನು ಬಿಗಿದು ಕಟ್ಟುತ್ತಿದ್ದ ಸೊಂಟದ ಪಟ್ಟಿಯನ್ನು ವಜ್ರಗಳಿಂದ ಅಲಂಕರಿಸಲಾಗಿತ್ತು. ಕಂಪಣರಾಯನ ಕಣ್ಣುಗಳ ತುದಿ ನಸು ಗೆಂಪಾಗಿತ್ತು. ಹುಬ್ಬುಗಳಲ್ಲಿ ಸುಳಿ ಇದ್ದಿತು. ಎದೆಯ ಮೇಲೆ ಒಂದು ಮಚ್ಚೆ ಇತ್ತು. ಸಾಮುದ್ರಿಕ ಶಾಸ್ತ್ರದಂತೆ ಅವನಲ್ಲಿ ಮಹಾ ವೀರನ ಲಕ್ಷಣಗಳೂ ಚಕ್ರವರ್ತಿಯ ಚಿಹ್ನೆಗಳೂ ಇದ್ದವು. ಅವನ ಮೈಕಟ್ಟು ಬಲಾಢ್ಯವಾದದ್ದು. ಕಂಪಣನು ಒಳ್ಳೆಯ ತೇಜಸ್ವಿ ಯಾಗಿದ್ದನಲ್ಲದೆ, ರಾಜಕಾರ್ಯ ಚತುರನಾಗಿದ್ದ. ಉತ್ತಮ ಗುಣ ಶಾಲಿಯೂ ಧರ್ಮಶ್ರದ್ಧೆಯುಳ್ಳವನೂ ಆಗಿದ್ದ. ಎಂತಹ ಸಂದರ್ಭದಲ್ಲಿಯೂ ಮತೀಯವಾದ ನಿತ್ಯಕರ್ಮಗಳನ್ನು ತಪ್ಪದೆ ಆಚರಿಸುತ್ತಿದ್ದ. ಶ್ರೀರಾಮನಂತೆ ದುಷ್ಟರನ್ನು ದಂಡಿಸುವುದ ಕ್ಕಾಗಿಯೂ ಶಿಷ್ಟರನ್ನು ರಕ್ಷಿಸುವುದಕ್ಕಾಗಿಯೂ ಅವನು ಪಣ ತೊಟ್ಟಿದ್ದ. ಅವನಿಗೆ ಹಲವರು ಮಕ್ಕಳಿದ್ದರು.

ಕಂಪಣರಾಯನು ಸ್ವತಃ ವಿದ್ವಾಂಸ. ಶಾಸ್ತ್ರ, ಕಾವ್ಯ, ಸಂಗೀತಗಳಲ್ಲಿ ಅವನಿಗೆ ಶ್ರೇಷ್ಠವಾದ ಪಾಂಡಿತ್ಯವಿತ್ತು. ಅವನು 'ಸಾಹಿತ್ಯಾರ್ಣವ !' ಸಂಗೀತೈಕನಿಧಿ !' ಕಾಂಚೀ ಮತ್ತು ರಾಮೇ ಶ್ವರಗಳ ಬಳಿ ತನ್ನ ಶಾಸನಗಳನ್ನು ಸ್ಥಾಪಿಸಿದ. ಚೋಳ ಪಾಂಡ್ಯ

ಕೇರಳ ರಾಜ್ಯಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡು ವಿಜಯ ನಗರ ಸಾಮ್ರಾಜ್ಯದೊಡನೆ ಸೇರಿಸಿದ. ಪ್ರಜೆಗಳ ಹಿತಕ್ಕಾಗಿ ಅವರು ಕೊಡಬೇಕಾದ ಕರಭಾರವನ್ನು ಕಡಿಮೆ ಮಾಡಿದ. ಅವನು ಆಶ್ರಿತರಿಗೆ 'ಕಲ್ಪವೃಕ್ಷ'. ರಾಜನೀತಿಯಲ್ಲಿ ಯೌಗಂಧರಾಯಣನನ್ನು ಮೀರಿಸಿದ್ದ. ಬುಕ್ಕರಾಜನ ವಿಜಯನಗರ ಸಾಮ್ರಾಜ್ಯದಲ್ಲಿ ಕಂಪಣ ರಾಯನು ದಕ್ಷಿಣ ರಾಜ್ಯಗಳಿಗೆ ಮಹಾಮಂಡಲೇಶ್ವರನಾಗಿದ್ದನು.

## ವೀರ ಕಂಪಣನ ಸಾಧನೆಗಳು

ಕಂಪಣನ ರಾಜಧಾನಿ ಕಾಂಚಿಯಾಗಿದ್ದರೂ ಆಗಾಗ ಅವನು ಮಧುರೆಯಲ್ಲಿಯೂ ವಾಸಮಾಡುತ್ತಿದ್ದನೆಂದು ತಿಳಿದುಬರುತ್ತದೆ. ಈತನ ಆಳ್ವಿಕೆ ತಮಿಳುನಾಡಿಗೆ ಒಂದು ವರವಾಗಿ ಪರಿಣಮಿಸಿತು. ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿದ್ದ ತಮಿಳುನಾಡಿನ ಚರಿತ್ರೆಯಲ್ಲಿ ಕಂಪಣನ ಆಡಳಿತ ಒಂದು ಹೆಸರಾಂತ ಅಧ್ಯಾಯ ವಾಗಿದೆ. ಮಧುರೆಯ ಸುಲ್ತಾನರ ದುರಾಡಳಿತದಿಂದ 40 ವರ್ಷ ಗಳ ಕಾಲ ದಾರುಣವಾದ ಕ್ಷೋಭೆಗೆ ಒಳಗಾಗಿದ್ದ ಈ ನಾಡಿನಲ್ಲಿ ಶಾಂತಿ ನೆಲೆಸಿದ್ದು ವೀರ ಕಂಪಣನಿಂದಲೇ. ಶಂಭುವರಾಯ ರಾಜ ನಾರಾಯಣನಿಂದ ಪ್ರಜೆಗಳಿಗೆ ಸೌಖ್ಯವೇನೂ ಇರಲಿಲ್ಲ. ಅವನು ಹೇರಿದ ಕರಭಾರ ಅತಿಯಾಗಿತ್ತು. ಅವನು ಹಿಂದುವಾಗಿದ್ದರೂ ಬಹುಶಃ ಮುಸಲ್ಮಾನರ ಕೈಗೊಂಬೆಯಾಗಿದ್ದನೆಂದೂ ಸುಲ್ತಾನ ನಿಗೆ ಬೆಂಬಲವಾಗಿದ್ದನೆಂದೂ ಕಾಣುತ್ತದೆ. ಆದ್ದರಿಂದಲೇ ಬುಕ್ಕ ರಾಯನು ಮೊದಲು ರಾಜನಾರಾಯಣನನ್ನು ಅದುಮಬೇಕೆಂದೂ ಆದರಿಂದ ಮಧುರೆಯ ಸುಲ್ತಾನನನ್ನು ಗೆಲ್ಲುವುದು ಸುಲಭ ವಾಗುವುದೆಂದೂ ಕಂಪಣನಿಗೆ ಹೇಳಿರಬೇಕು. ಯವನರ ಹಾವಳಿ ಯಿಂದ ತಮಿಳುನಾಡು ಯಾವ ದುರವಸ್ಥೆಗೆ ಈಡಾಗಿತ್ತೆಂಬು

ದನ್ನು ಹಿಂದೆ ತಿಳಿಸಲಾಗಿದೆ. ಎಲ್ಲ ದೇವಸ್ಥಾನಗಳನ್ನೂ ಲೂಟಿ ಮಾಡಿ ಹಾಳುಗೆಡವಲಾಗಿತ್ತು. ಕೃಷಿಯನ್ನು ಸಂಪೂರ್ಣವಾಗಿ ಉಪೇಕ್ಷಿಸಲಾಗಿತ್ತು. ಹಳ್ಳಿಗರನ್ನು ಕಡಿಯುತ್ತ, ಮತಾಂತರಗೊಳಿಸುತ್ತ ಕೊಳ್ಳೆಹೊಡೆಯುತ್ತಿದ್ದರೆ ಕೃಷಿ ಉತ್ತಮವಾಗುವುದಾದರೂ ಹೇಗೆ? ಅಂಗಡಿಗಳೂ ಪ್ರಯಾಣ ಮಾರ್ಗಗಳೂ ದರೋಡೆಗಳ ತಾಣಗಳಾದರೆ ವಾಣಿಜ್ಯವು ನಡೆಯುವುದು ಹೇಗೆ? ಬ್ರಾಹ್ಮಣರನ್ನಂತೂ ಸದೆಬಡಿಯಲಾಗಿತ್ತು. ಗೋವಧೆ ನಿರಂತರವಾಗಿ ನಡೆಯುತ್ತಿತ್ತು. ಹೀಗೆ ಎಲ್ಲ ವಿಧದಲ್ಲಿಯೂ ಶೋಚನೀಯ ಪರಿಸ್ಥಿತಿ ತಾಂಡವವಾಡುತ್ತಿತ್ತು. ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ವಿಷಯಗಳನ್ನು ಸರಿಪಡಿಸುವ ಭಾರ ವೀರಕಂಪಣನ ಹೆಗಲಿಗೆ ಬಿದ್ದಿತು.

ತಮಿಳುನಾಡು ದೇವಸ್ಥಾನಗಳ ತವರೂರು. ಇತಿಹಾಸಕಾರರು ಆಧಾರವನ್ನಿತ್ತು ಬರೆದಿದ್ದಾರೆ. ಆ ಕಾಲದ ದೇವಸ್ಥಾನವೆಂದರೆ ಒಂದು ದೊಡ್ಡ ಸಾಮಾಜಿಕ ಸಂಸ್ಥೆ. ಈ ಸಂಸ್ಥೆ ಪಾಠಶಾಲೆಗಳನ್ನೂ, ಆಸ್ಪತ್ರೆಗಳನ್ನೂ ನಡೆಸುತ್ತಿತ್ತು. ತನಗೆ ಸೇರಿದ್ದ ವಿಸ್ತಾರವಾದ ಜಮೀನಿನ ಕೃಷಿ ಮತ್ತು ಬೇಕಾದ ಕೆರೆ ಕಾಲುವೆಗಳ ನಿರ್ಮಾಣ ಅದಕ್ಕೆ ಸೇರಿತ್ತು. ರೈತರು ಬೆಳೆದ ಎಲ್ಲ ಬಗೆಯ ವಸ್ತುಗಳನ್ನೂ ಕೊಳ್ಳುವ ಮತ್ತು ಶೇಖರಿಸುವ ಮಾರುಕಟ್ಟೆಯೂ ಉಗ್ರಾಣವೂ ಈ ಸಂಸ್ಥೆಯೇ. ನಾಟ್ಯ, ಸಂಗೀತ ಮೊದಲಾದ ಕಲೆಗಳಿಗೆ ಇದು ಪ್ರೋತ್ಸಾಹವನ್ನು ನೀಡುತ್ತಿತ್ತು. ಬರಗಾಲದಲ್ಲಿ ಬಡವರಿಗೆ ಅನ್ನದಾನ ಮಾಡಿ ರಕ್ಷಿಸುತ್ತಿದ್ದ ದೇವಾಲಯಗಳ ಹೊಣೆ ಸಾಮಾನ್ಯವಾದ್ದಲ್ಲ. ಒಂದೊಂದು ದೇವಾಲಯದ ಆಶ್ರಯದಲ್ಲಿ ಸಾವಿರಾರು ಜನರು ನೌಕರರಾಗಿ ಜೀವಿಸುತ್ತಿದ್ದರು. ಹಣವನ್ನು ಸಾಲ ಕೊಡುವ ಮತ್ತು ರಕ್ಷಿಸಿ ಇಡುವ ಬ್ಯಾಂಕುಗಳ ಕಾರ್ಯವನ್ನು ಈ ಸಂಸ್ಥೆಗಳು ನಡೆಸುತ್ತಿದ್ದವು. ಅಲ್ಲದೆ ಧರ್ಮಕ್ಕೆ

ಪುರಸ್ಕಾರವನ್ನಿತ್ತು ಧಾರ್ಮಿಕ ಕಾರ್ಯಗಳು ನಡೆಯುವಂತೆ ಈ ಸಂಸ್ಥೆ ಏರ್ಪಡಿಸುತ್ತಿತ್ತು. ಸ್ಥಳೀಯವಾದ ವಾದವಿವಾದಗಳನ್ನು ಪರಿಹರಿಸಿ ತೀರ್ಪು ಕೊಡುವ ಕೆಲಸವನ್ನು ಸಹ ದೇವಾಲಯಗಳು ನಿರ್ವಹಿಸುತ್ತಿದ್ದವು" ಎಂದು. ಇಂತಹ ದೇವಾಲಯಗಳು ನಾಶ ವಾದಾಗ ಪ್ರಜೆಗಳಿಗಾದ ಹಾನಿಯೇನೆಂಬುದನ್ನು ಊಹಿಸಿಕೊಳ್ಳ ಬಹುದು.

ಈ ಕಾರಣಗಳಿಂದ ಕಂಪಣನ ದೃಷ್ಟಿ ಮೊದಲು ದೇವಾ ಲಯಗಳ ಕಡೆಗೆ ತಿರುಗಿತು. ವಿಜಯನಗರದ ಸ್ಥಾಪನೆಯಾದದ್ದೇ ಮುಸಲ್ಮಾನರ ಆಕ್ರಮಣವನ್ನು ತಡೆಗಟ್ಟಿ ಹಿಂದೂ ಸಂಸ್ಕೃತಿ ಯನ್ನು ಉಳಿಸಿ ಬೆಳೆಸುವುದಕ್ಕಾಗಿ. ಕಂಪಣನು ದೇವಾಲಯ ಗಳನ್ನು ಶುದ್ಧಿಗೊಳಿಸಿ ಪೂಜಾದಿ ಕಾರ್ಯಕ್ರಮಗಳನ್ನು ಮತ್ತೆ ಆರಂಭಗೊಳಿಸಿದನು. ಭಗ್ನವಾದ ಅವಶೇಷಗಳ ಜೀರ್ಣೋದ್ಧಾರ ಮಾಡಿ ದತ್ತಿಗಳನ್ನಿತ್ತು ಆಡಳಿತವನ್ನು ವ್ಯವಸ್ಥೆಗೊಳಿಸಿದನು. ಆಡಳಿತದಲ್ಲಿ ಕೆಲವು ಸುಧಾರಣೆಗಳನ್ನು ಮಾಡಿ ಹೊಸ ನೌಕರರನ್ನು ನೇಮಿಸಿದನು. ಪಣೆಪತ್ತಿ, ತಿರುವ್ಮೃತ್ ಕುಳಿ, ವೀಡಲ್ ಶಾಸನ ಗಳು ನಿತ್ಯಾರ್ಚನೆಗಾಗಿ ಕಂಪಣನಿತ್ತ ದಾನಗಳನ್ನು ವಿವರಿಸಿವೆ. ಕೆಲವು ಹಳ್ಳಿಗಳಲ್ಲಿದ್ದ ಬಟ್ಟೆ ನೇಯುವ ಮಗ್ಗಗಳ ತೆರಿಗೆ, ಚಿನ್ನದ ತೆರಿಗೆ, ಆದಾಯ ತೆರಿಗೆ ಮೊದಲಾದವುಗಳಿಂದ ವಸೂಲಾಗುತ್ತಿದ್ದ ಹಣವನ್ನು ದೇವಾಲಯದ ಸಂಸ್ಥೆಗಳಿಗೆ ಬಿಟ್ಟುಕೊಟ್ಟನು. ಮಾಡಂ ಬಾಕಂ ಎಂಬ ಹಳ್ಳಿಯಲ್ಲಿ ದೊರೆತಿರುವ ಒಂದು ಶಾಸನವು "ಈ ಗ್ರಾಮದ ಎಲ್ಲ ರಾಜಾದಾಯವನ್ನೂ ಇಲ್ಲಿಯ ದೇವಸ್ಥಾನದ ಕಾರ್ಯಕ್ಕೋಸ್ಕರ ಸರ್ವಮಾನ್ಯವೆಂದು ಬಿಟ್ಟುಕೊಟ್ಟಿದ್ದೇವೆ. ಈ ಕಾರ್ಯವು ಶಾಶ್ವತವಾಗಿ ನಡೆಯತಕ್ಕದ್ದು" ಎಂದು ಕಂಪಣನ ಆಜ್ಞೆಯನ್ನು ತಿಳಿಸುತ್ತದೆ. ತಿರುಕ್ಕೊಯಿಲೂರಿನ ಒಂದು ಶಾಸನ ದಲ್ಲಿ ಕಂಪಣನು ದೇವರಾಜಭಟ್ಟನಿಗೆ ದೇವತಾರ್ಚನೆಗಾಗಿ ಕೆಲವು

ಜಮೀನನ್ನು ದಾನ ಮಾಡಿರುವ ಸಂಗತಿ ಇದೆ. ತಿರುವಡಿಗೈ ಎಂಬಲ್ಲಿ ಸಿಕ್ಕಿದ ಒಂದು ಶಾಸನದಲ್ಲಿ ಶಟ್ಟಿಪಟ್ಟಿ ಎಂಬ ಹಳ್ಳಿಯನ್ನು ದೇವಸ್ಥಾನಕ್ಕೆ ಒಪ್ಪಿಸಿರುವುದಾಗಿ ಬರೆದಿದೆ. ಈ ಶಾಸನವು ಅಚ್ಚ ಕನ್ನಡಲಿಪಿಯಲ್ಲಿದೆ. ಇಂತಹ ಬೇಕಾದಷ್ಟು ಶಾಸನಗಳನ್ನು ಉದಾಹರಿಸಬಹುದು. ತಂಜಾವೂರು ಜಿಲ್ಲೆ ಕಣ್ಣಾನೂರಿನಲ್ಲಿದ್ದ ಹೊಯ್ಸಳೇಶ್ವರ ದೇವಾಲಯವನ್ನು ಕಂಪಣನು ಪರಿಶುದ್ಧಿಗೊಳಿಸಿ ಮೊದಲಿನಂತೆ ಪೂಜೆಗೆ ವ್ಯವಸ್ಥೆ ಮಾಡಿದನೆಂದೂ ಇನ್ನೊಂದು ಶಾಸನ ಹೇಳುತ್ತದೆ.

ಮಧುರೆಯ ಶಿವ ಮತ್ತು ವಿಷ್ಣು ದೇವಾಲಯಗಳಲ್ಲಿ ಕಂಪಣನು ಪೂಜಾವ್ಯವಸ್ಥೆಯನ್ನು ಮತ್ತೆ ಏರ್ಪಡಿಸಿದನೆಂಬ ವಿಷಯವಾಗಿ ಒಂದು ಸ್ಥಳಪುರಾಣದ ಹೇಳಿಕೆ ಕುತೂಹಲಕರವಾಗಿದೆ. “ಕರ್ಣಾಟದೇಶದ ಕಂಪಣದೇವನು ಇಲ್ಲಿಯ ಮುಸ್ಲಿಮರನ್ನು ಜಯಿಸಿ ರಾಜ್ಯವನ್ನು ತನ್ನ ವಶಕ್ಕೆ ತೆಗೆದುಕೊಂಡನು. ಬಹಳ ಕಾಲದಿಂದ ಬೀಗ ಮುದ್ರೆಗಳನ್ನು ಹಾಕಿದ್ದ ಶಿವ ಮತ್ತು ವಿಷ್ಣು ದೇವಾಲಯಗಳನ್ನು ಅವನು ತೆರೆಸಿದನು. ಬಾಗಿಲುಗಳನ್ನು ನೋಡಿದಾಗ ಒಂದು ವಿಸ್ಮಯ ಗೋಚರಿಸಿತು. ಬೀಗ ಹಾಕಿದ ದಿನ ಒಳಗಡೆ ಹೇಗಿದ್ದಿತೋ ಈಗಲೂ ಅದೇ ಪರಿಸ್ಥಿತಿ ಗೋಚರಿಸಿತು. ಕಂಪಣದೇವನ ಸ್ವತಃ ಎಲ್ಲ ದೇವತೆಗಳ ಮೂರ್ತಿಗಳನ್ನೂ ನೋಡಿದನು. ಬಾಗಿಲು ಹಾಕಿದ ದಿನ ಇದ್ದಂತೆ ಆಗಲೂ ದೀಪ ಉರಿಯುತ್ತಿತ್ತು. ಮೂರ್ತಿಗಳಿಗೆ ಲೇಪಿಸಿದ್ದ ಗಂಧ, ಹೂಮಾಲೆ, ಒಡವೆಗಳು ಅಚ್ಚಳಿಯದೆ ಹಾಗೆಯೇ ಇತ್ತು! ಈ ಅದ್ಭುತವನ್ನು ಕಂಡು ಕಂಪಣನು ಭಕ್ತಿಯಿಂದ ಕಣ್ಣುಮುಚ್ಚಿ ಧ್ಯಾನಪರನಾದನು. ಆಮೇಲೆ ಮಾಮೂಲಿನ ಪೂಜೆಯನ್ನು ಸಲ್ಲಿಸಿ ಅನೇಕ ಹಳ್ಳಿಗಳನ್ನು ದತ್ತಿಯಾಗಿ ಕೊಟ್ಟು ಅಮೂಲ್ಯ ಆಭರಣಗಳನ್ನರ್ಪಿಸಿದನು. ಹಿಂದಿನಂತೆ ಪೂಜಾ ವ್ಯವಸ್ಥೆ ನಡೆಯಬೇಕೆಂದು ಆಜ್ಞೆ



ಬಾಗಿಲು ಹಾಕಿದ ದಿನ ಇದ್ದಂತೆ ಆಗಲೂ ದೀಪ ಉರಿಯುತ್ತಿತ್ತು

ಮಾಡಿದನು." ಈ ಹೇಳಿಕೆಯ ಅಂಶಗಳೆಲ್ಲವನ್ನೂ ನಂಬುವುದು ಕಷ್ಟವಾದರೂ ಮಧುರೆಯ ದೇವಾಲಯಗಳ ಪೂಜಾವಿಧಾನವನ್ನು ಕಂಪಣನು ಪುನರಾರಂಭಿಸಿದನೆಂಬುದು ಸ್ಪಷ್ಟವಾಗುತ್ತದೆ.

## ವೀರ ಕಂಪಣನ ಅಧಿಕಾರಿಗಳು

ಆ ಕಾಲದ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಿದರೆ ವೀರ ಕಂಪಣನ ಸಾಧನೆಗಳು ಸಾಮಾನ್ಯವಾದವಲ್ಲ. ಸ್ವಾಮಿನಿಷ್ಠರೂ ಚತುರರೂ, ಧೀರರೂ ಆದ ಅಧಿಕಾರಿಗಳು ಒಗ್ಗಟ್ಟಿನಿಂದ ಕೆಲಸ ಮಾಡಿ ಆವನಿಗೆ ನೆರವಾದ್ದರಿಂದ ಕಂಪಣನ ಉದ್ದೇಶಗಳು ನೆರವೇರಿದವು. ಸುದೈವದಿಂದ ಅಂತಹ ಕೆಲವು ಅಧಿಕಾರಿಗಳ ಹೆಸರು ಮತ್ತು ಪರಿಚಯ ನಮಗೆ ದೊರಕಿದೆ. ಅವರು ಯಾರೆಂದರೆ:

## 1. ಸೋಮಪ್ಪ ಒಡೆಯರ್

ಇವನು ಕಂಪಣನ ಮಹಾಪ್ರಧಾನಿ. ಈತನಿಗೆ ದಂಡನಾಯಕ ಎಂಬ ಬಿರುದಿತ್ತು. ತಮಿಳು ನಾಡಿದಲ್ಲಿ ಕಂಪಣನ ಎಲ್ಲ ಚಟುವಟಿಕೆಗಳೂ ಇವನ ಸಲಹೆಯಿಂದ ನಡೆದವು. ತಿರುವಣ್ಣಾಮಲೆಯ ಬಳಿ ದೊರೆತ ಒಂದು ಶಾಸನದಲ್ಲಿ ಸೋಮನಾಥಪುರವೆಂಬ ಗ್ರಾಮವನ್ನು ಮಹಾಪ್ರಧಾನಿ ಸೋಮಪ್ಪ ಒಡೆಯರು ದತ್ತಿಯಾಗಿ ಕೊಟ್ಟರೆಂದು ದಾಖಲೆಯಾಗಿದೆ. ಈ ಶಾಸನ ಕ್ರಿ.ಶ. 1352ನೇ ವರ್ಷಕ್ಕೆ ಸೇರಿದ್ದು. ಈ ಬಗೆಯ ಶಾಸನಗಳು ಹಲವಾರು ದೊರೆತಿವೆ. ಕೆಲವು ಶಾಸನಗಳಲ್ಲಿ ಕಂಪಣನ ಆಜ್ಞೆಯಂತೆ ಸೋಮಪ್ಪ ಒಡೆಯರು ಈ ಕೆಲಸ ಮಾಡಿದರು ಎಂದು ನಮೂದಿಸಿದೆ.

ಸೋಮಪ್ಪ ದಂಡನಾಯಕನು ಸಂಸ್ಕೃತದಲ್ಲಿ ದೊಡ್ಡ ವಿದ್ವಾಂಸನಾಗಿದ್ದ. ಕೋಲಾರದ ಒಂದು ಶಾಸನದಲ್ಲಿ "ಸೋಮಪ್ಪನು ಕಂಪಣರಾಯನ ಮಂತ್ರಿ. ಬಹಳ ದೊಡ್ಡ ಸ್ವಭಾವದವನು. ಗುಣಗಳ ಆಕರ. ಪರಿಶುದ್ಧವಾದ ನಡತೆಯುಳ್ಳವನು.

ಅನೇಕ ಶಾಸ್ತ್ರಗಳಲ್ಲಿ ಪಂಡಿತ. ಬಹಳ ಬುದ್ಧಿವಂತ, ಕೀರ್ತಿಶಾಲಿ. ರಾಜನೀತಿಯಲ್ಲಿ ಚೆನ್ನಾಗಿ ಪಳಗಿದವನು" ಎಂದು ಹೇಳಿದೆ.

## 2. ಮಾರಯ್ಯ ನಾಯಕ

ಇವನು ಮೇಲೆ ಹೇಳಿದ ಸೋಮಪ್ಪ ದಂಡನಾಯಕನ ಮಗ. ಶಂಭುವರಾಯ ರಾಜನಾರಾಯಣನ ಅನೇಕ ಕೋಟೆಗಳನ್ನು ನಾಶಮಾಡಿ ಕಂಪಣರಾಜನು ವಿಜಯಗಳಿಸುವುದಕ್ಕೆ ಮುಖ್ಯ ಕಾರಣನಾದವನು. ಮಾಡಂಬಾಕಂನಲ್ಲಿ ದೊರೆತ ಒಂದು ಶಾಸನದಲ್ಲಿ ಆ ಕಾಲದ ಹೆಸರಾಂತ ವೀರರನ್ನು ಹೊಗಳುವ ಹತ್ತು ತಮಿಳು ಪದ್ಯಗಳಿವೆ. ಅದರಲ್ಲಿ ಮಾರಯ್ಯನಾಯಕನ ಶೌರ್ಯವನ್ನು ಹೊಗಳಲಾಗಿದೆ. ಬುಕ್ಕರಾಯರೂ ವೀರಕಂಪಣರೂ ಈತನ ಸಾಹಸಕಾರ್ಯಗಳಿಂದ ಬಹಳ ಸಂತೋಷಗೊಂಡರೆಂದು ಈ ಶಾಸನದಲ್ಲಿ ಬರೆದಿದೆ. ಈತನು ವೀರಯೋಧನು ಮಾತ್ರವೇ ಅಲ್ಲದ ಉದಾರಿಯೂ ಧರ್ಮನಿಷ್ಠನೂ ಆಗಿದ್ದನು.

## 3. ಆನೆಗೊಂದಿ ವಿಟ್ಟಪ್ಪ

ಈತನು ಆನೆಗೊಂದಿಯ ಅಪ್ಪರಾಜು ಎಂಬುವನ ಮಗ. ಭಾರದ್ವಾಜ ಗೋತ್ರದವನು. ಬಹಳ ಕಾಲ ಕಂಪಣನ ಭಂಡಾರಿ (ಕೋಶಾಧಿಕಾರಿ) ಯಾಗಿದ್ದನು. ಕ್ರಿ.ಶ. 1373ರ ಶಾಸನದ ಪ್ರಕಾರ ಇವನು ಸೋಮಪ್ಪನ ಸ್ಥಾನದಲ್ಲಿ ಪ್ರಧಾನಿಯಾದನೆಂದು ತಿಳಿದುಬರುತ್ತದೆ. ಹಿಂದೆ ಹೇಳಿದಂತೆ ಆ ಕಾಲದ ದೇವಾಲಯ ಸಂಸ್ಥೆ ಪ್ರಜೆಗಳಿಗೆ ಬಹುಮುಖದ ಸೇವೆ ಸಲ್ಲಿಸುತ್ತಿದ್ದುದರಿಂದ ಈ ಸಂಸ್ಥೆಗಳನ್ನು ಸರಿಪಡಿಸುವುದು ಕಂಪಣನ ಮುಖ್ಯ ಧ್ಯೇಯ

ವಾಗಿತ್ತು. ಈ ಕಾರ್ಯದಲ್ಲಿ ವಿಟ್ಟಪ್ಪನು ನಿರ್ವಹಿಸಿದ ಪಾತ್ರ ದೊಡ್ಡದು. ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ಈತನು ಮಾಡಿದ ಹಲವಾರು ಕಾರ್ಯಗಳನ್ನು ಬೇರೆ ಬೇರೆ ಶಾಸನಗಳು ವಿವರಿಸುತ್ತವೆ.

## ೪. ಗೋಪಣಾರ್ಯ

ಗೋಪಣ್ಣ, ಗೊಪ್ಪಣ್ಣ—ಎಂದೂ ಇವನ ಹೆಸರು ದೊರೆಯುತ್ತದೆ. ಇವನು ಭಾರದ್ವಾಜ ಗೋತ್ರದ ಆಪಸ್ತಂಬ ಸೂತ್ರದವನು. ತಿರುಪತಿಯಿಂದ ಶ್ರೀರಂಗನಾಥ ವಿಗ್ರಹವನ್ನು ವಾಪಸು ತಂದು ಶ್ರೀರಂಗದಲ್ಲಿ ಪ್ರತಿಷ್ಠಾಪಿಸಿದವನು ಈತನೇ. ಇವನು ಸೇನಾಪತಿಯೂ ಉತ್ತಮ ಯೋಧನೂ ಆಗಿದ್ದನು. ಕಂಪಣನಿಗೇ ಇವನಿಂದಾದ ಸಹಾಯ ಅಮೂಲ್ಯವಾದದ್ದು. ಕಂಪಣನು ಗೋಪಣಾರ್ಯನನ್ನು ಶೆಂಜಿ ಪ್ರಾಂತದ ಮಂಡಲೇಶ್ವರ (ಗವರ್ನರ್) ನನ್ನಾಗಿ ನೇಮಿಸಿದನು.

## 5. ಸಾಳುವ ಮಂಗು

ಈತನು ಮೊದಲು ಕಂಪಣನ ಓಲೆನಾಯಕ (ಅರಮನೆಯ ದಾಖಲೆ ಪತ್ರಗಳ ಅಧಿಕಾರಿ) ನಾಗಿದ್ದನು. ಅನಂತರ ಕಂಪಣನು ಇವನನ್ನು ದಳಪತಿಯನ್ನಾಗಿ ನೇಮಿಸಿದನು. ಶ್ರೀರಂಗ ಮತ್ತು ಮಧುರೆಗಳಲ್ಲಿ ಮುಸಲ್ಮಾನರ ಮೇಲೆ ನಡೆದ ಯುದ್ಧಗಳಲ್ಲಿ ಈತನು ಕಂಪಣನಿಗೆ ಪ್ರಶಂಸಾರ್ಹವಾದ ಸೇವೆಯನ್ನು ಸಲ್ಲಿಸಿದನು.

ರಾಮಯ್ಯದೇವ ಮತ್ತು ಮಲ್ಲಪ್ಪ ಎಂಬುವರು ಕಂಪಣನ ಸಾಮಂತಾಧಿಪತಿಗಳು. ದುಗ್ಗಣನು ಅರಮನೆಯ ಸರ್ವ

ನಿರ್ವಾಹಕ. ಇವರಲ್ಲದೆ ವೀರ ಕಂಪಣನ ಅಧಿಕಾರಿ ವರ್ಗದಲ್ಲಿ ಲಕ್ಕಪ್ಪ, ನಾಗಪ್ಪ, ವೀರ ಸಿಂಗದೇವ, ಯೆಕ್ಕದೇವರಸ, ಸ್ವಾಮಿ ದುರ್ರೋಗ ಕಂಡನ್, ಕಟ್ಟಪ್ಪ ನಾಯಕ ಮುಂತಾದವರು ಇದ್ದರೆಂದು ವಿಭಿನ್ನ ಶಾಸನಗಳಿಂದ ತಿಳಿದುಬರುತ್ತದೆ.

## ವೀರ ಕಂಪಣನ ರಾಜ್ಯಭಾರ

ಸುಮಾರು ನಲವತ್ತು ವರ್ಷಗಳವರೆಗೆ ಮಧುರೆಯಲ್ಲಿ ಸೇರಿಕೊಂಡು ಹೀನಾಯವಾದ ಹಿಂಸಾಕೃತ್ಯಗಳಲ್ಲಿ ತೊಡಗಿದ್ದ ಸುಲ್ತಾನರ ಹಾವಳಿಯನ್ನು ಕಂಪಣನು ನಿಶ್ಶೇಷವಾಗಿ ಅಡಗಿಸಿದನು. ಕರ್ನಾಟಕದ ಮುಳಬಾಗಿಲು, ಆಂಧ್ರದ ತಿರುಪತಿಯಿಂದ ಹಿಡಿದು ರಾಮೇಶ್ವರದ ವರೆಗಿನ ದಕ್ಷಿಣ ರಾಜ್ಯವೆಲ್ಲವೂ ವಿಜಯನಗರದ ಸಾಮ್ರಾಜ್ಯಕ್ಕೆ ಸೇರಿಹೋಯಿತು. ತಮಿಳು ನಾಡಿನ ಭಾಗಗಳಿಗೆ ಕಂಪಣನು ಮಹಾಮಂಡಲೇಶ್ವರನೆನಿಸಿ ರಾಜ್ಯಭಾರ ಮಾಡುತ್ತ ತಂದೆ ಬುಕ್ಕರಾಯನ ಅಭೀಷ್ಟವನ್ನು ನೆರವೇರಿಸಿದನು."ಕಂಪಣನು ಕಂಚಿಯಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ ಪ್ರಜೆಗಳು ಅವನನ್ನು ವಿಷ್ಣುವಿನ ಅವತಾರವೆಂದು ಭಾವಿಸಿದ್ದರು. ಅವನು ಅಂತಹ ವಿಜಯಶಾಲಿಯೂ ಧರ್ಮನಿಷ್ಠನೂ ಆಗಿದ್ದನು. ಅವನ ಆಡಳಿತ ವಿಧಾನವು ಅಚ್ಚುಕಟ್ಟಾಗಿಯೂ ಶಿಸ್ತಿನಿಂದ ಕೂಡಿ ಬಿಗಿಯಾಗಿಯೂ ಇದ್ದಿತು. ಅವನ ಪ್ರಯತ್ನವು ವ್ಯರ್ಥವಾದದ್ದೇ ಇಲ್ಲ. ಪ್ರಜೆಗಳ ಲ್ಲುಂಟಾದ ವಿವಾದವನ್ನು ಎಲ್ಲರಿಗೂ ಒಪ್ಪಿಗೆಯಾಗುವಂತೆ ಪಂಚಾಯಿತಿ ಕ್ರಮದಿಂದ ಬಗೆಹರಿಸುತ್ತಿದ್ದನು" ಎಂದು ಮಧುರಾ ವಿಜಯದಲ್ಲಿ ಗಂಗಾದೇವಿ ಹೇಳುತ್ತಾಳೆ.

ಕಂಪಣನ ಆಳ್ವಿಕೆಗೆ ಸಂಬಂಧಿಸಿದಂತೆ ದೊರೆತ 132ಕ್ಕೂ ಹೆಚ್ಚಿನ ಶಾಸನಗಳಲ್ಲಿ ಕ್ರಿ. ಶ. 1341ರಿಂದ 1374ರವರೆಗಿನ

ವೃತ್ತಾಂತಗಳಿವೆ. 33 ವರ್ಷಗಳವರೆಗೆ ಅವನು ಮಹಾಮಂಡಲೇಶ್ವರನಾಗಿದ್ದನೆಂದು ಸ್ಪಷ್ಟವಾಗಿದೆ. 1374ರಲ್ಲಿಯೇ ಅವನ ಹೆಸರಿನಲ್ಲಿ 8 ಶಾಸನಗಳು ದೊರೆತಿವೆ. ಅನಂತರ ಈಚಿನ ಶಾಸನ ಯಾವುದರಲ್ಲೂ ಅವನ ಹೆಸರಿಲ್ಲ.

## ಜೀವಿತಾವಧಿ

ಕಂಪಣನು ಎಲ್ಲಿಯವರೆಗೆ ಜೀವಿಸಿದ್ದನು ? ಈಗ ದೊರಕಿರ ತಕ್ಕವುಗಳಲ್ಲಿ ಕಂಪಣನ ಕಡೆಯ ಶಾಸನವೆಂದರೆ ತಾ. 2–10–1374 ರದು. ಅವನ ಮಗ ಜಮ್ಮಣನ ಒಂದು ಶಾಸನ ತಿರುವಣ್ಣಾಮಲೆಯಲ್ಲಿ ದೊರಕಿದೆ. ಕಂಪಣನ 'ರಾಜವಿಪಾಟನ ಸಂಧಿ'ಯ ಶಾಂತಿಗಾಗಿ ತಿರುವಣ್ಣಾಮಲೆಯ ದೇವಸ್ಥಾನದಲ್ಲಿ ವೇದಪಾರಾಯಣ ಮಾಡಿದ ಬ್ರಾಹ್ಮಣರಿಗೆ ಅವನ ಮಗ ಜಮ್ಮಣನು ಭೂದಾನ ಮಾಡಿದನೆಂದು ಅದರಲ್ಲಿ ಹೇಳಿದೆ. ಆ ಶಾಸನದ ತಾರೀಖು 17–12–1374. ಈ ಕಾರಣದಿಂದ ಒಂದೂವರೆ ತಿಂಗಳ ಅವಧಿಯಲ್ಲಿ 1374ನೆಯ ವರ್ಷದಲ್ಲೇ ಕಂಪಣನು ಮೃತನಾದನೆಂದು ಇತಿಹಾಸಕಾರರು ಹೇಳಿದ್ದಾರೆ.

ಕಂಪಣನ ತಂದೆ ಬುಕ್ಕರಾಯನು 1377ರಲ್ಲಿ ಸ್ವರ್ಗಸ್ಥನಾದನು. ಎಂದರೆ ಕಂಪಣನು ಮೃತನಾದ ಮೇಲೆ ಅವನ ತಂದೆಯ ಮರಣ ಸಂಭವಿಸಿತು. ಆದ್ದರಿಂದಲೇ ಕಂಪಣನು ಬುಕ್ಕರಾಯನ ಉತ್ತರಾಧಿಕಾರಿಯಾಗಿ ವಿಜಯನಗರವನ್ನು ಆಳಲಿಲ್ಲ. ಬುಕ್ಕರಾಯನ ಇನ್ನೊಬ್ಬ ಮಗ ಹರಿಹರನು ಇಮ್ಮಡಿ ಹರಿಹರ ಎಂಬ ಹೆಸರಿನಿಂದ ವಿಜಯನಗರದ ಸಿಂಹಾಸನವನ್ನೇರಿದನು. ಈ ಹರಿಹರನು ಬುಕ್ಕರಾಯನಿಗೆ ಗೌರಾಂಬಿಕೆಯೆಂಬ ಪತ್ನಿಯಲ್ಲಿ

ಜನಿಸಿದನು. ಇಮ್ಮಡಿ ಹರಿಹರರಾಯನು ಬುಕ್ಕರಾಯನಂತೆ ಕೀರ್ತಿಶಾಲಿಯಾಗಿ ಅತ್ಯಂತ ಸಾಮರ್ಥ್ಯದಿಂದ ರಾಜ್ಯವಾಳಿದನು.

ಹೀಗೆ ಕಂಪಣನು ತಂದೆಗಿಂತ ಮೊದಲೇ ಸ್ವರ್ಗಸ್ಥನಾದನು. ಅವನು ಬದುಕಿದ್ದಿದ್ದರೆ ಹರಿಹರನಿಗೆ ಎಂದಿಗೂ ರಾಜ್ಯ ಸಿಗುತ್ತಿರಲಿಲ್ಲ. ಪಟ್ಟಾಭಿಷಿಕ್ತನಾಗುವುದಕ್ಕೆ ಮೊದಲು ಹರಿಹರನು ಯಾವ ಕಾರ್ಯವನ್ನು ಸಾಧಿಸಿದ್ದಕ್ಕೂ ದಾಖಲೆ ಇಲ್ಲ. ಕಂಪಣನಾದರೋ ಬುಕ್ಕನಿಗೆ ಅತ್ಯಂತ ಪ್ರೀತಿಪಾತ್ರನಾಗಿದ್ದನಲ್ಲದೆ ಮಹಾ ದಕ್ಷನೂ, ವೀರನೂ ಆಗಿ ಪ್ರಜೆಗಳ ಪ್ರೀತಿಗೆ ಪಾತ್ರನಾಗಿದ್ದವನು. ಅವನು ಎಂದಿಗೂ ಹರಿಹರನಿಗೆ ಸಾಮ್ರಾಜ್ಯವನ್ನು ಬಿಟ್ಟುಕೊಡುತ್ತಿರಲಿಲ್ಲ. ಆದ್ದರಿಂದ ಕಂಪಣನು ಬುಕ್ಕರಾಯನಿಗಿಂತ ಸುಮಾರು ಎರಡು ವರ್ಷ ಮೊದಲೇ ಕಾಲವಶನಾದನೆಂದು ಹೇಳಬಹುದು.

ಕಂಪಣನಿಗಿಂತ ಬೇರೆಯಾಗಿ 'ಹರಿಹರ' ಎಂದು ಹೆಸರಿರುವುದೂ ಇತಿಹಾಸಕಾರರ ಹೇಳಿಕೆಗೆ ಮತ್ತೊಂದು ಕಾರಣವಾಗಿದೆ. ವಾಸ್ತವವಾಗಿ ಮೇಲೆ ಹೇಳಿದ ತಿರುವಣ್ಣಾಮಲೆಯ ಶಾಸನವನ್ನು ಸರಿಯಾಗಿ ಪರಿಶೀಲಿಸಬೇಕಾದ್ದಿದೆ. 'ರಾಜವಿಪಾಟನ ಸಂಧಿ' ಎಂದರೇನು ? ಜ್ಯೋತಿಶ್ಶಾಸ್ತ್ರದಂತೆ ರಾಜನಿಗೆ ಗಂಡಾಂತರ ಕಾರಿಯಾದ ಒಂದು ಗ್ರಹ ಸಂಧಿ ಎಂದು ಅರ್ಥವಾಗುತ್ತದೆ. ಕಂಪಣ ರಾಜನಿಗೆ ಬಂದಿದ್ದ ಕ್ರೂರಗ್ರಹಸಂಧಿಯ ಶಾಂತಿಗಾಗಿ ವೇದಪಾರಾಯಣವನ್ನು ಅವನ ಮಗ ಜಮ್ಮಣನು ಮಾಡಿಸಿರಬಹುದು.

ಇಮ್ಮಡಿ ಹರಿಹರನ ತಾಯಿ ಗೌರಾಂಬಿಕೆಯೆಂದು ಗೊತ್ತಾಗಿದೆ. ಕಂಪಣನ ತಾಯಿ ದೇವಾಯಿ ಆದ್ದರಿಂದ ಇಮ್ಮಡಿ ಹರಿಹರನು ಕಂಪಣನಿಗಿಂತ ಅನ್ಯವಾಗಿರಬೇಕೆಂಬ ಪ್ರಶ್ನೆ ತಲೆದೋರುತ್ತದೆ. ಇದೇನೂ ಉತ್ತರವಿಲ್ಲದ ಪ್ರಶ್ನೆಯಲ್ಲ. ಒಬ್ಬರಿಗೆ ಅನೇಕ ಹೆಸರುಗಳಿರುವುದು ಇತಿಹಾಸದಲ್ಲಿ ಹೊಸದಲ್ಲ. ಗೌರಾಂಬಿಕೆಯೋ ಗೌರೀ

ದೇವಿಯಾಗಬಹುದಷ್ಟೆ? ಅರಮನೆಯ ವ್ಯವಹಾರದಲ್ಲಿ ದೇವಿಯೇ 'ದೇವಾಯಿ'ಯಾಗಬಹುದು. ಈ ಹೆಸರೇ ಪ್ರಸಿದ್ಧವೂ ಜನ ಪ್ರಿಯವೂ ಆಗಿದ್ದಿರಬಹುದು. ಆದ್ದರಿಂದ ಗಂಗಾದೇವಿ ಗೌರಾಂಬಿಕೆಯನ್ನು ದೇವಾಯಿಯೆಂದು ಕರೆದಿರಬಹುದು.

ಇಲ್ಲಿ ಕುತೂಹಲಕರವಾದ ಒಂದು ವಿಷಯವನ್ನು ಪ್ರಸ್ತಾಪಿಸ ಬಹುದು. ಮಧುರಾವಿಜಯದಲ್ಲಿ ಕಂಪಣನ ಸೌಂದರ್ಯವನ್ನು ವರ್ಣಿಸುತ್ತ ಗಂಗಾದೇವಿ ಈ ಶ್ಲೋಕವನ್ನು ರಚಿಸಿದ್ದಾಳೆ.

ಸುತನವಃ ಫಲಕೇಷು ಮಧೂತ್ಸವೇ
ರತಿಪತಿಂ ಪರಿಲೇಖಿತುಮುದ್ಯತಾಃ ।
ಹೃದಯಗೋಚರತಾಮನಿಶಂ ಗತಂ
ಹರಿಹರಾತ್ಮಜಮೇವ ಸಮಾಲಿಖನ್ ॥

—ಸರ್ಗ 5, ಶ್ಲೋ. 71

"ವಸಂತೋತ್ಸವ ಸಮಯದಲ್ಲಿ ತರುಣಿಯರು ಹಲಗೆಯ ಮೇಲೆ ಮನ್ಮಥನನ್ನು ಬರೆಯಲು ತೊಡಗಿ, ಮನ್ಮಥನಿಗೆ ಬದ ಲಾಗಿ, ತಮ್ಮ ಹೃದಯದಲ್ಲಿಯೇ ನೆಲೆಸಿದ್ದ ಹರಿಹರಾತ್ಮಜನನ್ನು ಬರೆದು ಬಿಡುತ್ತಿದ್ದರು!"

ಇಲ್ಲಿ ಕಂಪಣನನ್ನು 'ಹರಿಹರಾತ್ಮಜ' ಎಂದು ಹೇಳಲಾಗಿದೆ. ಈ ಕಾವ್ಯಕ್ಕೆ ಸಂಸ್ಕೃತದಲ್ಲಿ ವ್ಯಾಖ್ಯಾನವನ್ನು ಬರೆದಿರುವ ಶ್ರೀ ಪೋತುಕುಚ್ಚಿ ಸುಬ್ರಹ್ಮಣ್ಯ ಶಾಸ್ತ್ರಿಗಳು "ಕಂಪಣನಿಗೆ ಹರಿಹರ ಎಂದು ಇನ್ನೊಂದು ಹೆಸರಿತ್ತು. ಆತ್ಮಜನೆಂದರೆ ಮನ್ಮಥ. ಆತ್ಮಜನಂತಿರುವ ಹರಿಹರ–ಹರಿಹರಾತ್ಮಜ–ಮನ್ಮಥನಂತಿದ್ದ ಕಂಪಣನನ್ನು ಆ ಸ್ತ್ರೀಯರು ಹಲಗೆಯ ಮೇಲೆ ಚಿತ್ರಿಸುತ್ತಿದ್ದರು ಎಂದರ್ಥ. ಇವನೇ ಇಮ್ಮಡಿ ಹರಿಹರನೆಂಬ ಹೆಸರಿನಿಂದ ಬುಕ್ಕನ ತರುವಾಯ ವಿಜಯನಗರದ ಸಿಂಹಾಸನವನ್ನೇರಿದನು" ಎಂದು

ಹೇಳುತ್ತಾರೆ. (ನೋಡಿ ; ಶ್ಲೋಕದ ವ್ಯಾಖ್ಯಾನ ಮತ್ತು ಮಧುರಾವಿಜಯದ ಪೀಠಿಕೆ).

ಆದರೆ ಎಲ್ಲ ಇತಿಹಾಸಕಾರರೂ ಇಮ್ಮಡಿ ಹರಿಹರನು ಬುಕ್ಕರಾಯನ ಇನ್ನೊಬ್ಬ ಮಗನೆಂದು ಹೇಳುತ್ತಾರೆ. ಬುಕ್ಕರಾಯನಿಗೆ ಅನೇಕ ಪತ್ನಿಯರಿದ್ದರು. ಗೌರಾಂಬಿಕೆಗೆ ಹೊನ್ನಾಯಿ ಎಂದೂ ಹೆಸರಿತ್ತು. ಈ ಹರಿಹರನು ಹೊನ್ನಾಯಿಯ ಮಗ. ವಿರೂಪಾಕ್ಷನು ಮಲ್ಲಾದೇವಿಯ ಮಗ. ದೇವಾಯಿಯ ಗರ್ಭದಲ್ಲಿ ವೀರ ಕಂಪಣ, (ಚಿಕ್ಕ) ಕಂಪಣ, ಸಂಗಮ—ಎಂಬ ಮೂವರು ಮಕ್ಕಳು ಜನಿಸಿದರು ಎಂದಿದ್ದಾರೆ.

ಹಾಗಾದರೆ ಕಂಪಣನನ್ನು ಹರಿಹರಾತ್ಮಜ ಎಂದು ಗಂಗಾದೇವಿ ಹೇಳಿದ್ದು ಹೇಗೆ ? ಆತ್ಮಜ ಶಬ್ದಕ್ಕೆ ಪುತ್ರ ಎಂಬ ಅರ್ಥ ಪ್ರಸಿದ್ಧವಾದದ್ದು. ಹರಿಹರನು ಕಂಪಣನ ದೊಡ್ಡಪ್ಪನಾದ್ದರಿಂದ ಕಂಪಣನನ್ನು ಹರಿಹರಾತ್ಮಜ ಎಂದು ಕರೆಯುವುದರಲ್ಲಿ ಅನೌಚಿತ್ಯವೇನೂ ಇಲ್ಲ ಎಂದು ಹೇಳಬೇಕಾಗುತ್ತದೆ. ಒಟ್ಟಿನಲ್ಲಿ ಇದು ತೊಡಕಿನ ಪ್ರಶ್ನೆಯೇ ಸರಿ ; ಸರಿಯಾದ ಆಧಾರ ದೊರೆತ ಹೊರತು ಈ ವಿಷಯವನ್ನು ನಿಶ್ಚಯಿಸುವುದಕ್ಕಾಗುವುದಿಲ್ಲ. ಕಂಪಣನ ಅನಂತರ ಅವನ ಮಗ ಜಮ್ಮಣನು ಮಧುರೆಯ ದೊರೆಯಾಗಿ ಆಡಳಿತವನ್ನು ನಡೆಸಿದನು. ಅವನ ಆಳ್ವಿಕೆ ಕ್ರಿ. ಶ. 1402ರವರೆಗೆ ಎಂದು ತಿಳಿದುಬರುತ್ತದೆ. ಬುಕ್ಕರಾಜನ ತರುವಾಯ ಅವನ ಮಗ ಇಮ್ಮಡಿ ಹರಿಹರನು ಇಪ್ಪತ್ತೆಂಟು ವರ್ಷಗಳ ಕಾಲ ಎಂದರೆ 1404ನೇ ವರ್ಷದವರೆಗೆ ವಿಜಯನಗರವನ್ನು ದಕ್ಷತೆಯಿಂದ ಆಳಿದನು.

ಶಿಸ್ತಿನ ಆಡಳಿತ, ನ್ಯಾಯ ಪಕ್ಷಪಾತ, ಎಲ್ಲ ಮತಗಳಲ್ಲಿಯೂ ಸಮದೃಷ್ಟಿ, ಪ್ರಜೆಗಳ ಹಿತರಕ್ಷಣೆಗಳಿಗೆ ವಿಜಯನಗರ ಸಾಮ್ರಾಜ್ಯ ಸುಪ್ರಸಿದ್ಧವಾಗಿತ್ತು. ಅತ್ಯಂತ ವೈಭವದಿಂದ ಬಾಳಿ ಕಣ್ಮರೆಯಾದ

ಈ ಸಾಮ್ರಾಜ್ಯದ ಇತಿಹಾಸ ಸ್ಪಷ್ಟವಾಗಿ ದೊರಕಿಲ್ಲ. ಇಂದಿಗೂ ಇದರ ಚರಿತ್ರೆ ಮಸಕು ಮಸಕಾಗಿಯೇ ಉಳಿದಿರುವುದು ಶೋಚನೀಯ. ಇತಿಹಾಸಕಾರರ ಸತತ ಪ್ರಯತ್ನಗಳೂ ಶೋಧನೆಗಳೂ ತಕ್ಕ ಫಲವನ್ನು ನೀಡಿಲ್ಲ. ಆದರೂ ಸಾಮ್ರಾಜ್ಯದ ಧುರಂಧರನಾದ ಬುಕ್ಕರಾಜನಿಗೆ ವೀರ ಕಂಪಣನು ಬಲಗೈಯಾಗಿ ಸೇವೆ ಸಲ್ಲಿಸಿದನೆಂಬುದಕ್ಕೂ ಮಹಾಮಂಡಲೇಶ್ವರನಾಗಿ ಮೂವತ್ತಮೂರು ವರ್ಷಗಳ ಕಾಲ ಮುಳಬಾಗಿಲು ಕಂಚಿ ಮಧುರೆಗಳಲ್ಲಿ ಆಡಳಿತವನ್ನು ನಡೆಸಿ ಪ್ರಜೆಗಳ ಹಿತವನ್ನು ಕಾಪಾಡಿದನೆಂಬುದಕ್ಕೂ ಸಾಕಷ್ಟು ಆಧಾರಗಳು ದೊರಕಿವೆ. ಇದೊಂದು ಸಂತೋಷದ ಸಂಗತಿ.

# ಆಧಾರ ಗ್ರಂಥಗಳು


1. The Tamil Country Under Vijayanagar
—Dr. A. Krishnaswamy
2. The Delhi Sultanate Vol. VI
—Bharathiya Vidya Bhavan
3. ವಿಜಯನಗರ ಸಾಮ್ರಾಜ್ಯ —ಶ್ರೀ ದೇಸಾಯಿ ಪಾಂಡುರಂಗರಾಯರು
4. ವಿಜಯನಗರ ಸಾಮ್ರಾಜ್ಯ
—ಶ್ರೀ ಬೋರೆ ಅನಂತ
—ಶ್ರೀ ಕುಲಕರಣಿ ಪ್ರಹ್ಲಾದ } ಭುವನೇಶ್ವರಿ ಗ್ರಂಥಮಾಲೆ ಬೆಳಗಾವಿ
5. ಕರ್ಣಾಟಕ ಪರಂಪರೆ II —ಮೈಸೂರು ರಾಜ್ಯ ಸರ್ಕಾರ
6. ಮಧುರಾವಿಜಯ (ಸಂಸ್ಕೃತ ಕಾವ್ಯ)—ಗಂಗಾದೇವಿ
ಶ್ರೀ ಪೋತುಕುಚ್ಚಿ ಸುಬ್ರಹ್ಮಣ್ಯ ಶಾಸ್ತ್ರಿಗಳ ಮುನ್ನುಡಿ
7. ಮಧುರಾವಿಜಯ
—ಶ್ರೀ ಟಿ. ಎ. ಗೋಪೀನಾಥರಾವ್ ಅವರ ಇಂಗ್ಲಿಷಿನ ಮುನ್ನುಡಿ
8. ವಿಜಯನಗರದ ಕಲೆ ಮತ್ತು ಸಾಹಿತ್ಯ
—ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಬೆಂಗಳೂರು

## ಕನ್ನಡನಾಡು ಮತ್ತು ಕನ್ನಡಿಗರ ಪರಂಪರೆ ಮಾಲೆಯ ಪ್ರಕಟಣೆಗಳು

ಕದಿರೆ ಮಂಜುನಾಥ —ರಸಿಕ ಪುತ್ತಿಗೆ

ಸಂಪನ್ಮೂಲಗಳು–ಕೈಗಾರಿಕಾವಕಾಶಗಳು–ಬೀದರ್ ಜಿಲ್ಲೆ —ಅಭಿನಂದನ

ಸಂಪನ್ಮೂಲಗಳು–ಕೈಗಾರಿಕಾವಕಾಶಗಳು–ರಾಯಚೂರು ಜಿಲ್ಲೆ —ಅಭಿನಂದನ

ಸಂಪನ್ಮೂಲಗಳು–ಕೈಗಾರಿಕಾವಕಾಶಗಳು–
ಚಿತ್ರದುರ್ಗ ಜಿಲ್ಲೆ —ಬೆ. ಗೋ. ರಮೇಶ್

ಅ. ನ. ಕೃಷ್ಣರಾಯ —ಶಾ. ಮಂ. ಕೃಷ್ಣರಾಯ

ಅಟ್ಟೆ ಕುಣಬಿಗಳು —ಸುಬ್ರಾಯ ಹೆಗಡೆ

ಕರ್ನಾಟಕದ ಜಟ್ಟಿಗಳು —ಹಾಸನ ರಂಗಾಜೆಟ್ಟಿ ಸೋಮಸುಂದರಂ

ಸಂಪನ್ಮೂಲಗಳು ಕೈಗಾರಿಕಾವಕಾಶಗಳು–
ಮಂಡ್ಯ ಜಿಲ್ಲೆ —ಬೆ. ಗೋ. ರಮೇಶ್

ಸಂಪನ್ಮೂಲಗಳು–ಕೈಗಾರಿಕಾವಕಾಶಗಳು–
ದಕ್ಷಿಣ ಕನ್ನಡ ಜಿಲ್ಲೆ —ಬೆ. ಗೋ. ರಮೇಶ್

ಸಂಪನ್ಮೂಲಗಳು–ಕೈಗಾರಿಕಾವಕಾಶಗಳು–ಗುಲ್ಬರ್ಗ ಜಿಲ್ಲೆ —ಅಭಿನಂದನ

ಕಡೆಂಗೋಡ್ಲು ಶಂಕರಭಟ್ಟ —ಎ. ವಿ. ನಾವಡ

ಕಪಿಲಾ ನದಿ —ಬನ್ನಂಗಾಡಿ ಸಿದ್ಧಲಿಂಗಯ್ಯ


ಸಂಪನ್ಮೂಲಗಳು–ಕೈಗಾರಿಕಾವಕಾಶಗಳು–
ಕೋಲಾರ ಜಿಲ್ಲೆ —ಬೆ. ಗೋ. ರಮೇಶ್

ಸಂಪನ್ಮೂಲಗಳು–ಕೈಗಾರಿಕಾವಕಾಶಗಳು–ಉತ್ತರ ಕನ್ನಡ ಜಿಲ್ಲೆ —ಶಾಂತಿ

ಸಂಪನ್ಮೂಲಗಳು–ಕೈಗಾರಿಕಾವಕಾಶಗಳು–ಬಳ್ಳಾರಿ ಜಿಲ್ಲೆ —ಅಭಿನಂದನ

ಕರ್ನಾಟಕದ ಉದ್ಯಾನವನಗಳು —ಬೆ. ಗೋ. ರಮೇಶ್

IBH



ಮತ್ತು ಕನ್ನಡಿಗರ ಚರಿತ್ರೆ

ಐ ಬಿ ಎಚ್ ಪ್ರಕಾಶನ
ಬೆಂಗಳೂರು

518